


© NCERT not to be republished

विद्यया ऽमृतमश्नुते
एन सी ई आर टी
NCERT

राष्ट्रीय शैक्षिक अनुसंधान और प्रशिक्षण परिषद्
NATIONAL COUNCIL OF EDUCATIONAL RESEARCH AND TRAINING

ಆನಂದ್

ಬಾಲವಾಟಿಕಾಗಾಗಿ ತರಬೇತುದಾರರ ಕೈಪಿಡಿ

**ಮೊದಲ ಆವೃತ್ತಿ**

**ಫೆಬ್ರುವರಿ 2023 ಮಾಘ 1944**

**PD T BS**

**ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ಸಂಶೋಧನೆ ಮತ್ತು ತರಬೇತಿ -2023**

**ಎಲ್ಲಾ ಹಕ್ಕುಗಳನ್ನು**

- ಪ್ರಕಾಶಕರ ಪೂರ್ವಾನುಮತಿ ಇಲ್ಲದೆ ಈ ಕೃತಿಯ ಯಾವುದೇ ಭಾಗವನ್ನು ಪುನರ್ರಚಿಸುವಂತಿಲ್ಲ, ತಿದ್ದುಪಡಿ ಮಾಡುವಂತಿಲ್ಲ, ಅನುವಾದ ಮಾಡುವಂತಿಲ್ಲ ಹಾಗೆಯೇ ಇತರೆ ಯಾಂತ್ರಿಕ ವಿಧಾನಗಳನ್ನು ಬಳಸಿ ನಕಲು ಮಾಡುವಂತಿಲ್ಲ, ಝೆರಾಕ್ಸ್, ರೆಕಾರ್ಡಿಂಗ್ ಮಾಡುವಂತಿಲ್ಲ.
- ಈ ಪುಸ್ತಕದ ಮಾರಾಟವು ನಿಬಂಧನೆಗೆ ಒಳಪಟ್ಟಿದೆ, ಪ್ರಕಾಶಕರ ಒಪ್ಪಿಗೆ ಇಲ್ಲದೆ ಮಾರಾಟ ಮಾಡುವುದಾಗಲಿ, ಪರಭಾರೆ ಮಾಡುವುದಾಗಲಿ, ಮರು ಮಾರಾಟ ಮಾಡುವುದಾಗಲಿ, ಅಥವಾ ಮತ್ತಾವುದೋ ರೀತಿಯಲ್ಲಿ ವಿಲೇವಾರಿ ಮಾಡುವುದನ್ನಾಗಲಿ ಮಾಡುವಂತಿಲ್ಲ. ಜೊತೆಗೆ ಪುಸ್ತಕದ ಮುಖಪುಟದ ವಿನ್ಯಾಸ, ಬೈಂಡಿಂಗ್ ಬದಲಾವಣೆ ಮಾಡುವಂತಿಲ್ಲ.
- ಪುಸ್ತಕದ ಖಚಿತ ಬೆಲೆಯನ್ನು ಪುಸ್ತಕದಲ್ಲಿ ಮುದ್ರಿಸಲಾಗಿದೆ. ಹಾಗಾಗಿ ಯಾವುದೇ ಪರಿಷ್ಕೃತ ದರವನ್ನು ರಬ್ಬರ್ ಸ್ಟ್ಯಾಂಪ್ ಮೂಲಕ ಸ್ಟಿಕ್ಕರ್ ಮೂಲಕವಾಗಲಿ, ಇನ್ನಿತರ ಯಾವುದೇ ರೀತಿಯ ಬದಲಾವಣೆಗಳು ಸರಿಯಲ್ಲ. ಆ ಬದಲಾವಣೆಗಳು ಸ್ವೀಕಾರಾರ್ಹವಲ್ಲ.

**ಪ್ರಕಾಶನದ ಕಚೇರಿಗಳು**

**ವಿಭಾಗ, NCERT**

NCERT ಕ್ಯಾಂಪಸ್
ಶ್ರೀ ಅರಬಿಂದೋ ಮಾರ್ಗ
ನವದೆಹಲಿ 110 016 ದೂರವಾಣಿ :011 -26562708

108, 100ಅಡಿ ರಸ್ತೆ
ಹೊಸಕೆರೆ ಹಳ್ಳಿ ವಿಸ್ತರಣೆ
ಬನಶಂಕರಿ 3ನೇ ಹಂತ
ಬೆಂಗಳೂರು 560 085 ದೂರವಾಣಿ :080 -26725740

ನವಜೀವನ್ ಟ್ರಸ್ಟ್ ಕಟ್ಟಡ
ಪಿ.ಒ. ನವಜೀವನ್
ಅಹ್ಮದಾಬಾದ್ 380014 ದೂರವಾಣಿ : 079-27541448

CWC ಕ್ಯಾಂಪಸ್
ಧನ್ಕಲ್ ಬಸ್ ನಿಲ್ದಾಣದ ಎದುರು
ಪಾನಿಹಾ, ಕಲ್ಕತ್ತ 700 114 ದೂರವಾಣಿ : 033-25530454

**CWC** ಕಾಂಪ್ಲೆಕ್ಸ್
ಮಾಲಿಗಾಂವ್
ಗುವಾಹಟಿ 781 021 ದೂರವಾಣಿ : 0361-2674869

**ಎನ್.ಸಿ.ಇ.ಆರ್.ಟಿ. 80 ಜಿ.ಎಸ್.ಎಂ. ಕಾಗದದಲಲ್ ವಾಟರ್ ಮಾರ್ಕ್ ನೊಂದಿಗೆ ಮುದ್ರಿತವಾಗಿದೆ**

---

ಪ್ರಕಾಶಕರು, ಕಾರ್ಯದರ್ಶಿಗಳು, ನ್ಯಾಷನಲ್ ಕೌನ್ಸಿಲ್ ಆಫ್ ಇಂಡಿಯಾ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ, ಶ್ರೀ ಅರಬಿಂದೋ ಮಾರ್ಗ, ನವದೆಹಲಿ 110016

**ಪ್ರಕಾಶನ ತಂಡ**

ಮುಖ್ಯಸ್ಥರು, ಪ್ರಕಾಶನ ವಿಭಾಗ ಶ್ರೀ ಅನೂಪ್ ಕುಮಾರ್ ರಜಪೂತ್

ಮುಖ್ಯಸ್ಥರು, ಉತ್ಪಾದನಾ ವಿಭಾಗ ಶ್ರೀ ಅರುಣ್ ಚಿತ್ಕಾರ

ಮುಖ್ಯ ವ್ಯವಸ್ಥಾಪಕರು
ವ್ಯವಹಾರ ನಿರ್ವಹಣಾ ವಿಭಾಗ ಶ್ರೀ ವಿಪಿನ್ ಹಾಲ್

ಪ್ರಧಾನ ಸಂಪಾದಕರು (ಪ್ರಭಾರಿ) ಶ್ರೀ ಬಿಜ್ನಾನ್ ಸುತಾರ್

ಸಹಾಯಕ ಅಧಿಕಾರಿಗಳು
ಉತ್ಪಾದನಾ ವಿಭಾಗ

ಮುಖಪುಟ ಮತ್ತು ವಿನ್ಯಾಸ
DTP ಸೆಲ್, PD

© NCERT not to be republished

# ಉನ್ಮುಖ

# ಶಿಶುವಿಹಾರಕ್ಕಾಗಿ

# ತರಬೇತುದಾರರ ಕೈಪಿಡಿ

© NCERT
not to be republished

# ನಾನು ಶಿಶುವಿಹಾರಕ್ಕೆ ಹೋಗುತ್ತೇನೆ



ನಾನು ಶಿಶುವಿಹಾರಕ್ಕೆ ಹೋಗುತ್ತೇನೆ
ನಾವೆಲ್ಲರೂ ಶಿಶುವಿಹಾರಕ್ಕೆ ಹೋಗುತ್ತೇವೆ
ಶಿಶುವಿಹಾರ, ಶಿಶುವಿಹಾರ, ಶಿಶುವಿಹಾರ.
ಇರಲಿ! ಇರಲಿ ! ಇರಲಿ !

ಚೀಲವಿಲ್ಲ,
ಪುಸ್ತಕಗಳಿಲ್ಲ,
ಹಾಗಾದರೆ ಏನಿದೆ?

ವಿವಿಧ ರೀತಿಯ ಆಟವಿದೆ,
ಆಟಗಳಲ್ಲಿ ಪಾಠವಿದೆ,
ಹಾಗಿದೆ ನಮ್ಮ ಶಿಶುವಿಹಾರ,
ಸಂತಸ ಭರಿತ ಶಿಶುವಿಹಾರ.
ಶಿಶುವಿಹಾರ, ಶಿಶುವಿಹಾರ, ಶಿಶುವಿಹಾರ.
ಇರಲಿ! ಇರಲಿ ! ಇರಲಿ !

© NCERT not to be republished

© NCERT
not to be republished

© NCERT
not to be republished

# ಮುನ್ನುಡಿ

'ಸಂಸ್ಕಾರ' ಎಂಬ ವಿಶಾಲವಾದ ಹೆಸರಿನಲ್ಲಿ ಭಾರತವು ಮಕ್ಕಳ ಆರಂಭಿಕ ಲಾಲನೆ-ಪಾಲನೆಯ ಸಂಪ್ರದಾಯವನ್ನು ತನ್ನದೇ ಆದ ರೀತಿಯಲ್ಲಿ ಅನ್ವಯಿಸಿಕೊಂಡು ಬಂದ ಶ್ರೀಮಂತ ದೇಶ. ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಈ ಸಂಸ್ಕಾರಗಳು ಮುನ್ನಡೆಯುತ್ತಾ ಬಂದಿವೆ. ಮಕ್ಕಳ ಜೀವನದ ಮೊದಲ ಎಂಟು ವರ್ಷಗಳಲ್ಲಿನ ಅವರ ಬೆಳವಣಿಗೆ, ನಡವಳಿಕೆ ಮತ್ತು ನಂತರದ ವರ್ಷಗಳಲ್ಲಿ ಸಾಮರ್ಥ್ಯ ವಿಕಾಸಗಳ ಪ್ರತಿಯೊಂದು ಅಂಶವನ್ನು ಅನುಕೂಲಕರವಾಗಿ ರೂಪಿಸಲು ಸಂಸ್ಕಾರದ ರೂಪುರೇಷೆಗಳು ದಾರಿ ಮಾಡಿಕೊಡುತ್ತವೆ.

ಈ ಹಂತದ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು, ರಾಷ್ಟ್ರೀಯ ಶಿಕ್ಷಣ ನೀತಿ (NEP) 2020, ಮೊದಲ ಐದು ವರ್ಷಗಳನ್ನು (3-8 ವರ್ಷ ವಯಸ್ಸಿನ ಮಕ್ಕಳು) ಶಾಲಾ ಶಿಕ್ಷಣದ ವ್ಯವಸ್ಥೆಗೆ ಕರೆತರಬೇಕೆಂದು ಶಿಫಾರಸು ಮಾಡುತ್ತದೆ. ವ್ಯಕ್ತಿಯ ಜೀವನಪರ್ಯಂತ ಕಲಿಕೆ, ಸಾಮಾಜಿಕ ಮತ್ತು ಭಾವನಾತ್ಮಕ ನಡವಳಿಕೆ ಮತ್ತು ಒಟ್ಟಾರೆ ಆರೋಗ್ಯಕರ ಬೆಳವಣಿಗೆಯ ಈ ಹಂತವನ್ನು ಅವಲಂಬಿಸಿರುತ್ತದೆ. ಇದಲ್ಲದೆ, ಮಕ್ಕಳು ಸಾಕ್ಷರತೆ, ಸಂಖ್ಯಾಜ್ಞಾನ ಮತ್ತು ಸೃಜನಶೀಲ ಮತ್ತು ಕಲಾತ್ಮಕ ಸಾಮರ್ಥ್ಯಗಳನ್ನು ಪಡೆಯಲು ಬೇಕಾದ ಶಾರೀರಿಕ ಮತ್ತು ಚಲನಶೀಲ ಕೌಶಲಗಳ ಅಭಿವೃದ್ಧಿಗೆ ದೃಢವಾದ ಬೆಂಬಲದ ಅಗತ್ಯವಿರುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯು ಈ ಹಂತಕ್ಕೆ ವಿಶೇಷವಾದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಶಿಫಾರಸು ಮಾಡುತ್ತದೆ, ಇದು ಇಡೀ ಶಿಕ್ಷಣ ವ್ಯವಸ್ಥೆಗೆ ಆರಂಭಿಕ ಹಂತದಿಂದಲೇ ಉನ್ನತ-ಗುಣಮಟ್ಟದ ಶಿಕ್ಷಣವನ್ನು ನೀಡಲು ಮಾರ್ಗದರ್ಶನ ನೀಡುವುದಲ್ಲದೆ, ಇದೇ ವ್ಯವಸ್ಥೆಯನ್ನು ಶಾಲಾ ಶಿಕ್ಷಣದ ಮುಂದಿನ ಹಂತಗಳಿಗೆ ಕೊಂಡೊಯ್ಯುತ್ತದೆ.

ಮೂಲಭೂತ ಹಂತದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು (NCF-FS), ಬಾಲ್ಯದ ಆರೈಕೆ ಮತ್ತು ಶಿಕ್ಷಣದಲ್ಲಿ ಭಾರತೀಯ ಸಂಸ್ಕೃತಿ ಮತ್ತು ನೀತಿಗಳಲ್ಲಿ ನಿರೂಪಿಸಲಾದ ತತ್ವಾದರ್ಶಗಳನ್ನು ಮೌಲಿಕ ಕ್ರಮಗಳ ಅಳವಡಿಕೆಯನ್ನು ಶಿಫಾರಸ್ಸು ಮಾಡುತ್ತದೆ. ಇದಲ್ಲದೆ, ಇದು ಶಾಲೆಯ ಆವರಣದಲ್ಲಿ ಅಭಿವೃದ್ಧಿಪಡಿಸುವ ಜ್ಞಾನ, ಕೌಶಲ್ಯ ಮತ್ತು ವರ್ತನೆಗಳೊಂದಿಗೆ, ಮನೆಯಲ್ಲಿನ ಮಗುವಿನ ಅನುಭವಗಳನ್ನು ಸಮನ್ವಯಗೊಳಿಸುವತ್ತ ಗಮನಹರಿಸುತ್ತದೆ. ಇದು ಈಗ ಚಾಲ್ತಿಯಲ್ಲಿರುವ, ಕೇವಲ ಪುಸ್ತಕಗಳಿಂದ ಕಲಿಯುವ ವ್ಯವಸ್ಥೆಯಿಂದ ಹೊರಬಂದು, ಚಟುವಟಿಕಾ-ಮಾರ್ಗ ಮತ್ತು ಸಾಮರ್ಥ್ಯ-ಆಧಾರಿತ ಕಲಿಕಾ ಪದ್ಧತಿಗಳತ್ತ ಹೆಜ್ಜೆ ಹಾಕಲು ಸೂಚಿಸುತ್ತದೆ. ಇದರಲ್ಲಿ ಮಕ್ಕಳು ಚಟುವಟಿಕೆಗಳಲ್ಲಿ ತಮ್ಮನ್ನು ತಾವು ಹೇಗೆ ತೊಡಗಿಸಿಕೊಳ್ಳುವರು ಹಾಗು ಅವುಗಳಿಂದ ಏನು ಕಲಿಯುವರು ಎಂಬುದು ಬಹಳ ಮುಖ್ಯವಾಗುತ್ತದೆ.

ಈ ಶಿಫಾರಸ್ಸುಗಳನ್ನು ಅನುಸರಿಸಿ, ಆರಂಭಿಕ ಹಂತದ ಪಠ್ಯಕ್ರಮದಲ್ಲಿ, ಕೃಷ್ಣ ಯಜುರ್ವೇದದ ತೈತ್ತಿರೀಯ ಸಂಹಿತೆಯ ಭಾಗವಾದ ತೈತ್ತಿರೀಯ ಉಪನಿಷತ್‌ನಲ್ಲಿ ವಿವರಿಸಿದಂತೆ, ಪಂಚಕೋಶೀಯ ವಿಕಾಸದ (ಮಾನವ ವ್ಯಕ್ತಿತ್ವದ ಐದು ಪದರುಗಳ ಬೆಳವಣಿಗೆ) ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಲಾಗಿದೆ. ಇದರ ಪ್ರಕಾರ ಜೀವನದ ಅಂತಿಮ ಗುರಿ ವ್ಯಕ್ತಿಯು ತನ್ನ ಅಂತರಾತ್ಮವನ್ನು ಅರಿತುಕೊಳ್ಳುವುದು. ತನ್ನನ್ನು ತಾನು ತಿಳಿದುಕೊಳ್ಳುವಂತೆ ಮಾಡುವುದು, ಶಿಕ್ಷಣವು ವ್ಯಕ್ತಿಯ ಸಮಗ್ರ ಅಭಿವೃದ್ಧಿಯ ಸಮಕಾಲೀನ ದೃಷ್ಟಿಕೋನದೊಂದಿಗೆ ಭಾರತದ ನಾಗರೀಕ ಬೌದ್ಧಿಕ ಸಾಮರಸ್ಯದ ಮೂಲಕ ಇದಕ್ಕೆ ಅನುವು ಮಾಡಿಕೊಡುತ್ತದೆ.

ಈ ಪ್ರಯತ್ನದ ಯಶಸ್ಸು ನಿಸ್ಸಂಶಯವಾಗಿ ಅಂಗನವಾಡಿಗಳು, ಶಾಲೆಗಳು ಮತ್ತು ಸಂಬಂಧಿತ ಸಂಸ್ಥೆಗಳು ಈ ಹಂತದ ಮಕ್ಕಳಲ್ಲಿ ಸೂಕ್ತ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಪ್ರೋತ್ಸಾಹಿಸಲು ತೆಗೆದುಕೊಳ್ಳುವ ನಿರ್ಧಾರಗಳ ಮೇಲೆ ಅವಲಂಬಿತವಾಗಿದೆ. ಇದನ್ನು ಸಾಧಿಸಲು, ಶಿಫಾರಸ್ಸು ಮಾಡಿರುವ, ಪಠ್ಯಕ್ರಮದ ವೆಬ್‌ಸೈಟ್‌ಗಳಲ್ಲಿ ಮುದ್ರಣ ಮತ್ತು ಆನ್‌ಲೈನ್‌ನಲ್ಲಿ ಲಭ್ಯವಿರುವ ವಿವಿಧ ಕಲಿಕೆ ಮತ್ತು ಬೋಧನಾ ಸಾಮಗ್ರಿಗಳನ್ನು ಬಳಸಿಕೊಳ್ಳುವ ಅಗತ್ಯವಿದೆ. ಅಂಗನವಾಡಿಗಳು, ಶಾಲೆಗಳು ಮತ್ತು ಸಂಬಂಧಿತ ಸಂಸ್ಥೆಗಳ ಮಾರ್ಗದರ್ಶನದಲ್ಲಿ ಪೋಷಕರು ಸಹ ಇದನ್ನು ಪಾಲಿಸಬೇಕು.

© NCERT not to be republished

ಈ ಐದು ವರ್ಷಗಳಲ್ಲಿ ಪಠ್ಯಕ್ರಮ ವಿನ್ಯಾಸಕರು ವಿಭಿನ್ನ ಸಾಮರ್ಥ್ಯಗಳ ಕಲಿಕೆಯನ್ನು ಅನುಕ್ರಮವಾಗಿ ವ್ಯವಸ್ಥಿಗೊಳಿಸುವಲ್ಲಿ ಉತ್ತಮ ಪಾತ್ರವನ್ನು ನಿರ್ವಹಿಸಿದ್ದಾರೆ. ಹಾಗೆ ಮಾಡುವಾಗ, ಅವರು ವಿಷಯಗಳ ಹೊರಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಹ ಪರಿಹರಿಸಿದ್ದಾರೆ. ಮೂಲಭೂತ ಕಲಿಕೆಯ ವಿವಿಧ ಹಂತಗಳಲ್ಲಿ ಜ್ಞಾನ ಸಂಪಾದನೆಯ ಪ್ರಕ್ರಿಯೆಯನ್ನು ಪುನರ್ರಚಿಸುವ ಮತ್ತು ಮರುರೂಪಿಸುವ ಮೂಲಕ ಅವರು ಈ ಹೊಸ ನೀತಿಯನ್ನು ಸಮರ್ಥಿಸಿಕೊಂಡಿದ್ದಾರೆ. ಈ ಉದ್ದೇಶವನ್ನು ಸಾಧಿಸಲು ಮಕ್ಕಳ ಮನೋಭಾವ ಮತ್ತು ವಿವಿಧ ವ್ಯವಸ್ಥೆಗಳಲ್ಲಿ ಕಲಿಯುವುದಕ್ಕೆ ಮತ್ತು ಕಲಿಸುವುದಕ್ಕೆ ಲಭ್ಯವಿರುವ ಸಮಯವನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ.

ಶಿಶುವಿಹಾರದ ಮಕ್ಕಳಿಗಾಗಿ ಅಭಿವೃದ್ಧಿಪಡಿಸಲಾದ ಈ ಚಟುವಟಿಕೆಯ ಪುಸ್ತಕದಲ್ಲಿ, NEP 2020 ರ ದೃಷ್ಟಿಕೋನಗಳನ್ನು ಗಮನದಲ್ಲಿಟ್ಟುಕೊಂಡು, ಸರಳವಾದ, ಆಸಕ್ತಿದಾಯಕ ಮತ್ತು ಆಕರ್ಷಕವಾಗಿರುವ ಸಾಮರ್ಥ್ಯ-ಆಧಾರಿತ ಅಭ್ಯಾಸ ಹಾಳೆಗಳನ್ನು ಒದಗಿಸಲಾಗಿದೆ. ಈ ಚಟುವಟಿಕೆಗಳು ಅಂತರ್ಗತ ಶಿಕ್ಷಣ ಒದಗಿಸುವುದಲ್ಲದೆ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಹೊಂದಿದ್ದು ಕಲಿಕಾ ಸಮಯದಲ್ಲಿ ಮಕ್ಕಳ ಮುಂದೆ ಸೃಷ್ಟಿಸಲು ಶಿಕ್ಷಕರಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ. ಪುಸ್ತಕದಲ್ಲಿ ಕಲೆ ಮತ್ತು ಕರಕುಶಲತೆಯನ್ನು ಸಂಯೋಜಿಸಿದ್ದು, ಶಿಕ್ಷಕರು ಮಕ್ಕಳಲ್ಲಿ ಈ ಚಟುವಟಿಕೆಯಲ್ಲಿನ ಕಲಾತ್ಮಕ ಭಾವವನ್ನು ಪ್ರಶಂಶಿಸಲು ಮತ್ತು ಅರಿಯಲು ಪ್ರೇರೇಪಿಸುತ್ತದೆ. ಈ ಚಟುವಟಿಕೆ ಪುಸ್ತಕವು, ವಿಷಯಾಧಾರಿತ ಪರಿಕಲ್ಪನೆಗಳನ್ನು ತಮ್ಮದೇ ಶೈಲಿಯಲ್ಲಿ ವ್ಯಕ್ತಪಡಿಸಲು ಅಗತ್ಯವಿರುವ ಸಾಂದರ್ಭಿಕ ಅರಿವನ್ನು ಒದಗಿಸುತ್ತದೆ. ಈ ಚಟುವಟಿಕೆ ಪುಸ್ತಕದಲ್ಲಿ ವಿಷಯಗಳು ಸಮೃದ್ಧವಾಗಿದ್ದು, ಮಕ್ಕಳಿಗೆ ವೈವಿಧ್ಯಮಯ ಅನುಭವಗಳನ್ನು ಒದಗಿಸಲು ಆಟಿಕೆಗಳು ಮತ್ತು ಆಟಗಳ ಮೂಲಕ ಚಟುವಟಿಕಾ-ಕಲಿಕೆಯನ್ನು ಸಂಯೋಜಿಸಲಾಗಿದೆ. ಅವರಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಬೆಳೆಸುವಂತಹ ಪ್ರಶ್ನೆಗಳನ್ನು ಒಳಗೊಂಡಿದೆ. ಮಕ್ಕಳಲ್ಲಿ ಪರಿಸರದ ಬಗ್ಗೆ ಸೂಕ್ತ ಮನೋಭಾವವನ್ನು ಬೆಳೆಸುವಂತಹ ವಿಷಯ ಸಾಮಗ್ರಿ ಹಾಗೂ ಚಟುವಟಿಕೆಗಳನ್ನು ಹೊಂದಿದೆ. ಇದಲ್ಲದೆ, NEP 2020 ರ ಶಿಫಾರಸ್ಸುಗಳ ಆಧಾರದಲ್ಲಿ ಸ್ಥಳೀಯ ದೃಷ್ಟಿಕೋನಗಳ ಮೇರೆಗೆ ಕಲಿಕೆ ಮತ್ತು ಬೋಧನೋಪಕರಣಗಳಲ್ಲಿ ಅವಶ್ಯಕ ಬದಲಾವಣೆ ಮಾಡಲು ರಾಜ್ಯ / ಕೇಂದ್ರಾಡಳಿತ ಪ್ರದೇಶಗಳಿಗೆ ಅವಕಾಶವನ್ನೂ ಒದಗಿಸುತ್ತದೆ.

ಮೂಲಭೂತ ಕಲಿಕೆಗಾಗಿ ಈ ಪಠ್ಯಕ್ರಮ ಮತ್ತು ಕಲಿಕೆ-ಬೋಧನಾ ಸಾಮಗ್ರಿಯನ್ನು ಅಭಿವೃದ್ಧಿಪಡಿಸುವಲ್ಲಿ ಸಂಬಂಧಿತ ಆಯೋಗದ ಪರಿಶ್ರಮವನ್ನು NCERT ಪ್ರಶಂಶಿಸುತ್ತದೆ. ಈ ಕಾರ್ಯವನ್ನು ಸಕಾಲದಲ್ಲಿ ಮತ್ತು ಶ್ಲಾಘನೀಯ ರೀತಿಯಲ್ಲಿ ಪೂರ್ಣಗೊಳಿಸಿದ್ದಕ್ಕಾಗಿ ಈ ಸಮಿತಿಯ ಅಧ್ಯಕ್ಷರಾದ ಪ್ರೊ.ಶಶಿಕಲಾ ವಂಜರಿ ಮತ್ತು ಇತರ ಎಲ್ಲ ಸದಸ್ಯರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಇದನ್ನು ಸಾಧ್ಯವಾಗಿಸುವಲ್ಲಿ ತಮ್ಮ ಸಹಾಯಹಸ್ತ ನೀಡಿದ ಎಲ್ಲಾ ಸಂಸ್ಥೆಗಳು ಮತ್ತು ಶೈಕ್ಷಣಿಕ ಕೇಂದ್ರಗಳಿಗೆ ನಾನು ಕೃತಜ್ಞನಾಗಿದ್ದೇನೆ. ವಿಶೇಷವಾಗಿ, ವಿವಿಧ ಮೌಲ್ಯಗಳ ಪರಿಕಲ್ಪನೆಗಳನ್ನು ಒಳಗೊಂಡ ಚಟುವಟಿಕೆ ಪುಸ್ತಕಗಳನ್ನು ತಯಾರಿಸಲು ಸಮಯೋಚಿತ ಮತ್ತು ಮೌಲ್ಯಯುತ ಸಲಹೆಗಳನ್ನು ನೀಡಿದ ರಾಷ್ಟ್ರೀಯ ಚಾಲನಾ ಸಮಿತಿಯ ಅಧ್ಯಕ್ಷರಾದ ಡಾ.ಕೆ.ಕಸ್ತೂರಿರಂಗನ್ ಶಾಸನಸ್ಥ ಸಮಿತಿ ಮತ್ತು ಪರಿಶೀಲನಾ ಸಮಿತಿಯೂ ಸೇರಿದಂತೆ ಸಮಿತಿಗಳ ಸದಸ್ಯರಿಗೆ ನಾನು ಕೃತಜ್ಞನಾಗಿದ್ದೇನೆ.

ಭಾರತದಲ್ಲಿ ಶಾಲಾ ಶಿಕ್ಷಣವನ್ನು ಸುಧಾರಿಸಲು ಮತ್ತು ಅಭಿವೃದ್ಧಿಪಡಿಸಿರುವ ಎಲ್ಲಾ ಕಲಿಕೆ ಮತ್ತು ಬೋಧನಾ ಸಾಮಗ್ರಿಗಳ ಗುಣಮಟ್ಟದಲ್ಲಿ ನಿರಂತರ ಸುಧಾರಣೆಯನ್ನು ತರಲು ಬದ್ಧವಾಗಿರುವ ಸಂಸ್ಥೆಯಾಗಿ, NCERT ತನ್ನ ಎಲ್ಲಾ ಹಿತೈಷಿಗಳ ವಿಮರ್ಶಾತ್ಮಕ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಸ್ವೀಕರಿಸುತ್ತದೆ.

(ದಿನೇಶ್ ಪ್ರಸಾದ್ ಸಕ್ಲಾನಿ
ನಿರ್ದೇಶಕರು, ಎನ್.ಸಿ.ಇ.ಆರ್.ಟಿ)

27 ಜನವರಿ 2023 ನವದೆಹಲಿ

© NCERT not to be republished

# ಅಭಿವೃದ್ಧಿಪಡಿಸಿದ ತಂಡ

**ಸಲಹೆಗಾರರು**

ದಿನೇಶ್ ಪ್ರಸಾದ್ ಸಕಲಾನಿ, ನಿರ್ದೇಶಕರು, ಎನ್.ಸಿ.ಇ.ಆರ್.ಟಿ, ನವದೆಹಲಿ

**ಮಾರ್ಗದರ್ಶಕರು**

ಶಶಿಕಲಾ ವಂಜರಿ, ಮಾಜಿ ಕುಲಪತಿಗಳು, ಎಸ್.ಎನ್.ಡಿ.ಟಿ ಮಹಿಳಾ ವಿಶ್ವವಿದ್ಯಾನಿಲಯ, ಮುಂಬೈ, ಮಹಾರಾಷ್ಟ್ರ
ಅಧ್ಯಕ್ಷರು, ಪಠ್ಯಕ್ರಮ ಮತ್ತು ಪಠ್ಯಪುಸ್ತಕ ಅಭಿವೃದ್ಧಿ ಸಮಿತಿ

ಸುನೀತಿ ಸನ್ವಲ್, ಮುಖ್ಯಸ್ಥರು, ಡಿಇಇ, ಎನ್.ಸಿ.ಇ.ಆರ್.ಟಿ, ಸದಸ್ಯ ಸಂಚಾಲಕರು, ಪಠ್ಯಕ್ರಮ ಮತ್ತು ಪಠ್ಯಪುಸ್ತಕ ಅಭಿವೃದ್ಧಿ ಸಮಿತಿ

**ಸಹಕರಿಸಿದವರು**

ರುಮಿಲಾ ಸೋನಿ, ಸಹಪ್ರಾಧ್ಯಾಪಕರು, ಡಿಇಇ, ಎನ್.ಸಿ.ಇ.ಆರ್.ಟಿ
ಭರತ್ ಡೊಕಾಯಿ, ನಿರ್ದೇಶಕರು, ವಿದ್ಯಾಪೀಠ, ಗಾಂಧಿಧಾಮ, ಗುಜರಾತ್
ದಿವ್ಯಾಂಶು ಬಾಯ್ ದಾವೆ, ಡಿಜಿ ಮತ್ತು ವಿಸಿ ಮಕ್ಕಳ ವಿಶ್ವವಿದ್ಯಾನಿಲಯ, ಗಾಂಧಿನಗರ, ಗುಜರಾತ್

**ಪರಿಶೀಲನಾ ಸಮಿತಿ**

ಎಂ.ಸಿ. ಪಂತ್, ಪ್ರಾಧ್ಯಾಪಕರು ಮತ್ತು ಕುಲಪತಿಗಳು, ಎನ್ಐಇಪಿಎ, ನವದೆಹಲಿ

ಸುನೀತಿ ಸನ್ವಲ್, ಮುಖ್ಯಸ್ಥರು, ಡಿಇಇ, ಎನ್.ಸಿ.ಇ.ಆರ್.ಟಿ, ಸದಸ್ಯ ಸಂಚಾಲಕರು, ಪಠ್ಯಕ್ರಮ ಮತ್ತು ಪಠ್ಯಪುಸ್ತಕ ಅಭಿವೃದ್ಧಿ ಸಮಿತಿ

ಕೆ. ಮಯೂರಿ, ನಿವೃತ್ತ ಪ್ರಾಧ್ಯಾಪಕರು, ಮಾನವ ಅಭಿವೃದ್ಧಿ ಮತ್ತು ಕುಟುಂಬ ಅಧ್ಯಯನ, ಸಮುದಾಯ ವಿಜ್ಞಾನ ಕಾಲೇಜು, ಪಿಜೆಟಿಎಸ್ಎಯು, ಹೈದರಾಬಾದ್

ರೀಟ ಸೋನಾವತ್, ಮಾಜಿ ಡೀನ್, ಗೃಹವಿಜ್ಞಾನ ವಿಭಾಗ, ಎಸ್.ಎನ್.ಡಿ.ಟಿ ಮಹಿಳಾ ವಿಶ್ವವಿದ್ಯಾನಿಲಯ, ಮುಂಬೈ, ಮಹಾರಾಷ್ಟ್ರ

ಜೋಬಿ ಬಾಲಕೃಷ್ಣನ್, ಪ್ರಾಥಮಿಕ ಶಿಕ್ಷಕರು, ಕೇರಳ
ಅನುಪ್ ರಜಪೂತ್, ಮುಖ್ಯಸ್ಥರು, ಪ್ರಕಾಶನ ವಿಭಾಗ, ಎನ್.ಸಿ.ಇ.ಆರ್.ಟಿ
ಪದ್ಮ ಯಾದವ್, ಪ್ರಾಧ್ಯಾಪಕರು, ಡಿಇಇ, ಎನ್.ಸಿ.ಇ.ಆರ್.ಟಿ
ರಂಜನಾ ಅರೋರ, ಮುಖ್ಯಸ್ಥರು, ಪಠ್ಯಕ್ರಮ ಅಧ್ಯಯನ ವಿಭಾಗ, ಎನ್.ಸಿ.ಇ.ಆರ್.ಟಿ
ಜ್ಯೋತ್ಸ್ನ ತಿವಾರಿ, ಮುಖ್ಯಸ್ಥರು, ಲಿಂಗ ಅಧ್ಯಯನ ವಿಭಾಗ, ಎನ್.ಸಿ.ಇ.ಆರ್.ಟಿ
ಭಾರತಿ ಕೌಶಿಕ್, ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಡಿಐಸಿಟಿ ಮತ್ತು ಟಿ, ಸಿಐಇಟಿ, ಎನ್.ಸಿ.ಇ.ಆರ್.ಟಿ

**ಶೈಕ್ಷಣಿಕ ಸಂಯೋಜನಾ ಸದಸ್ಯರು**

ರುಮಿಲಾ ಸೋನಿ, ಸಹಪ್ರಾಧ್ಯಾಪಕರು, ಡಿಇಇ, ಎನ್.ಸಿ.ಇ.ಆರ್.ಟಿ

© NCERT
not to be republished

## ಕೃತಜ್ಞತೆಗಳು

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತು ಕೃತಜ್ಞತೆಯೊಂದಿಗೆ ಅಧ್ಯಕ್ಷರ, ರಾಷ್ಟ್ರೀಯ ಚಲನಾ ಸಮಿತಿಯ ಸದಸ್ಯರ ಮತ್ತು ಆದೇಶ ಗುಂಪಿನ ಸದಸ್ಯರ ಮಾರ್ಗದರ್ಶನ ಹಾಗೂ ಬೆಂಬಲಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಅಧ್ಯಕ್ಷರು ಹಾಗೂ ಪಠ್ಯಕ್ರಮ ಮತ್ತು ಎಲ್.ಟಿ.ಎಂ ಸಮಿತಿಯ ಸದಸ್ಯರೆಲ್ಲರ ನಿರಂತರ ಸಹಕಾರಕ್ಕೆ ಅಭಿನಂದನೆಗಳು.

"ಆನಂದ - ಬಾಲವಾಟಿಕಾದ ಚಟುವಟಿಕೆಯ ಪುಸ್ತಕ"ದ ಬೆಳವಣಿಗೆಯಲ್ಲಿ ತಮ್ಮ ಕೊಡುಗೆಯನ್ನು ನೀಡಿದ ಮೌಶ್ಮಿ ಬೋಸ್, ಮಾಜಿ ಮುಖ್ಯೋಪಾಧ್ಯಾಯರು, ಸಲ್ವನ್ ಪಬ್ಲಿಕ್ ಸ್ಕೂಲ್, ಗುರುಗ್ರಾಮ ಹಾಗೂ ಮೋನಿಕಾ ಸೋಧಿ, ಸಂಯೋಜಕರು, ಜೂನಿಯರ್ ಸ್ಕೂಲ್, ಹೆಚ್.ಡಿ.ಎಫ್.ಸಿ, ಗುರುಗ್ರಾಮ ಇವರಿಗೆ ಪರಿಷತ್ತು ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಚಟುವಟಿಕೆಯ ಪುಸ್ತಕವನ್ನು ಪೂರ್ಣಗೊಳಿಸುವಲ್ಲಿ ತಮ್ಮ ಸಲಹೆಗಳನ್ನು ನೀಡಿದ ದೀಕ್ಷಾ ದಿವಾನ್, ಶೈಕ್ಷಣಿಕ ಸಲಹೆಗಾರರು, ಡಿಇಇ, ಎನ್.ಸಿ.ಇ.ಆರ್.ಟಿ ಹಾಗೂ ಅಮ್ಮನ್ದೀಪ್ ಕೌರ್, ಪಿಹೆಚ್ಡಿ ಸ್ಕಾಲರ್ ಮತ್ತು ಸಹಾಯಕರು, ಡೆಲ್ಲಿ ವಿಶ್ವವಿದ್ಯಾನಿಲಯ ರವರನ್ನು ಪರಿಷತ್ತು ಇವರಿಗೆ ಕೃತಜ್ಞತೆಗಳು.

ರಾಜೀವ್ ಪಹುಜ, ಗ್ರಾಫಿಕ್ ಡಿಸೈನರ್; ಮೊಹಮ್ಮದ್ ರಾಕಿಬ್, ಚಿತ್ರಗಾರರು; ರುಬಿನ ಅನ್ಸಾರಿ, ಗ್ರಾಫಿಕ್ ಚಿತ್ರಗಾರರು; ಸೈನಾ ಅನ್ಸಾರಿ, ಚಿತ್ರಗಾರರು; ಚಂಚಲ್ ಚೌಹಾನ್, ಸಹಾಯಕ ಸಂಪಾದಕರು, ಎನ್.ಸಿ.ಇ.ಆರ್.ಟಿ; ಸಚಿನ್ ತನ್ವರ್, ಡಿಟಿಪಿ ನಿರ್ವಾಹಕರು, ಎನ್.ಸಿ.ಇ.ಆರ್.ಟಿ; ವಿವೇಕ್ ಮಂಡಲ್, ಗ್ರಾಫಿಕ್ ಡಿಸೈನರ್, ಎನ್.ಸಿ.ಇ.ಆರ್.ಟಿ; ಚಂಚಲ್ ರಾಣಿ, ಎಲ್ಡಿಸಿ, ಡಿಇಇ, ಎನ್.ಸಿ.ಇ.ಆರ್.ಟಿ; ಅಭಿಷೇಕ್ ಪಾಂಡೆ, ಬೆರಳಚ್ಚುಗಾರರು, ಡಿಇಇ, ಎನ್.ಸಿ.ಇ.ಆರ್.ಟಿ; ಪವನ್ ಕುಮಾರ್, ಡಿಟಿಪಿ ನಿರ್ವಾಹಕರು, ಡಿಇಇ, ಎನ್.ಸಿ.ಇ.ಆರ್.ಟಿ; ಇವರ ಒಟ್ಟಾರೆ ನೆರವಿಗೆ ಪರಿಷತ್ತಿನಿಂದ ಕೃತಜ್ಞತೆಗಳು.

ಸಂಪಾದಕೀಯ ವಿಭಾಗದ ಸಹಕಾರಗಳನ್ನು ಸಹ ಎನ್.ಸಿ.ಇ.ಆರ್.ಟಿ. ಕೃತಜ್ಞತೆಯಿಂದ ಸ್ಮರಿಸುತ್ತದೆ.


© NCERT not to be republished

## ಚಟುವಟಿಕೆ ಪುಸ್ತಕದ ಬಗ್ಗೆ

3 ರಿಂದ 8 ವರ್ಷ ವಯಸ್ಸಿನ ಮಕ್ಕಳನ್ನು ಒಳಗೊಂಡಿರುವ ಮೂಲಭೂತ ಕಲಿಕಾ ಹಂತವು ಅತ್ಯಂತ ಪ್ರಾಮುಖ್ಯತೆಯನ್ನು ಹೊಂದಿದೆ. ಈ ಹಂತವು ಯಾವುದೇ **ಮಗುವಿನ** (ವ್ಯಕ್ತಿಯ) ಜೀವನದಲ್ಲಿ ಮೆದುಳು ಅತ್ಯಂತ ವೇಗವಾಗಿ ಬೆಳವಣಿಗೆಯಾಗುವ ಅವಧಿಯಾಗಿದೆ. **ಹಾಗಾಗಿ** ಮಕ್ಕಳ ಮಿದುಳಿನ ಆರೋಗ್ಯಕರ ಬೆಳವಣಿಗೆ ಧನಾತ್ಮಕ ಕಲಿಕೆಯ ಅನುಭವಗಳ ಅಗತ್ಯವಿದೆ. ಸಕಾರಾತ್ಮಕ ಮತ್ತು ಯೋಜಿತ ಅನುಭವಗಳು ಮಕ್ಕಳ ಭವಿಷ್ಯದ ಕಲಿಕೆ, ಅವರ ಆರೋಗ್ಯ, ಅವರ ನಡವಳಿಕೆ ಮತ್ತು ಯಶಸ್ಸಿಗೆ ಅಡಿಪಾಯವನ್ನು ನಿರ್ಮಿಸುತ್ತದೆ. **ಉಲ್ಲಾಸದಾಯಕವಾದ** ದೈನಂದಿನ ಅನುಭವಗಳು ಮಗುವಿನ ಮೆದುಳನ್ನು ರೂಪಿಸುತ್ತವೆ. ಶಿಶು ವಿಹಾರಕ್ಕಾಗಿ ತಯಾರಿಸಿರುವ ಆನಂದ್-ಚಟುವಟಿಕೆ ಪುಸ್ತಕದಲ್ಲಿ ನೀಡಲಾದ ಮಾದರಿ ಅಭ್ಯಾಸ ಹಾಳೆಗಳು (work sheets) (ಒಟ್ಟು 92) ಅದನ್ನೇ ಚಿತ್ರಿಸುತ್ತವೆ.

ಈ ಹಂತದಲ್ಲಿ ಮಕ್ಕಳಿಗೆ ಕಲಿಯಲು ಸಹಾಯ ಮಾಡುವ ಉತ್ತಮ ಮಾರ್ಗವೆಂದರೆ ಅವರ ವಯಸ್ಸು ಮತ್ತು ಬೆಳವಣಿಗೆಯ ಮಟ್ಟಕ್ಕೆ ಅನುಗುಣವಾಗಿ 'ಸರಳತೆಯಿಂದ ಸಂಕೀರ್ಣದ ಕಡೆಗೆ', 'ಪರಿಚಿತದಿಂದ ಅಪರಿಚಿತದ ಕಡೆಗೆ' ಮತ್ತು 'ನಿರ್ದಿಷ್ಟ ಮೂರ್ತ ಅನುಭವಗಳಿಂದ ಅಮೂರ್ತ ವಿಷಯಗಳ' ಆಧಾರಿತ ಚಟುವಟಿಕೆಗಳನ್ನು ನೀಡುವುದು ಇತ್ಯಾದಿ. ಮಕ್ಕಳ ವಯಸ್ಸು ಮತ್ತು ಬೆಳವಣಿಗೆಗೆ ಸೂಕ್ತವಾದ ಆಟ-ಆಧಾರಿತ ಚಟುವಟಿಕೆಗಳು ಮತ್ತು ಅನುಭವಗಳನ್ನು ಒದಗಿಸುವುದು ಶಿಕ್ಷಕರು ಮತ್ತು ಪಾತ್ರವಾಗಿರುತ್ತದೆ. ಇವು ವಾಸ್ತವಿಕ ಮತ್ತು ಪ್ರಾಯೋಗಿಕ ಅನುಭವಗಳಾಗಿದೆ. ಈ ಪುಸ್ತಕದಲ್ಲಿ ನಂತರ ಅಭ್ಯಾಸಕ್ಕಾಗಿ ಅಭ್ಯಾಸ ಹಾಳೆಗಳ ರೂಪದಲ್ಲಿ ಒದಗಿಸಿದೆ. ಯೋಜಿಸಲಾದ ಅಭ್ಯಾಸ ಹಾಳೆಗಳು ಮಕ್ಕಳಿಗೆ ವಿವಿಧ ಸಾಮರ್ಥ್ಯಗಳ ತಿಳುವಳಿಕೆಯನ್ನು ಪಡೆಯಲು ಮತ್ತು ಅವರ ಮೂಲಭೂತ ಕೌಶಲಗಳನ್ನು ಬಲಪಡಿಸಲು ಸಹಾಯ ಮಾಡುತ್ತವೆ.

ಕಲಿಕೆಯಲ್ಲಿ ಸಂತಸ ಇದ್ದಾಗ ಮಗು ಉತ್ತಮವಾಗಿ ಕಲಿಯುತ್ತದೆ, ಆದ್ದರಿಂದ ಯಾವುದೇ ಕೆಲಸವನ್ನು ಮಾಡುವಾಗ ಮಕ್ಕಳಿಗೆ ಸ್ವಾತಂತ್ರ್ಯ ಮತ್ತು ಮುಕ್ತ ಪರಿಸರವನ್ನು ಒದಗಿಸುವುದು ಬಹಳ ಮುಖ್ಯ. ಶಿಶುವಿಹಾರಕ್ಕಾಗಿ ಉತ್ತಮವಾಗಿ ವಿನ್ಯಾಸಗೊಳಿಸಿ ಸಂಯೋಜಿಸಲಾದ ಅಭ್ಯಾಸ ಹಾಳೆಗಳು ಮಕ್ಕಳಿಗೆ ಅಭ್ಯಾಸ ಮತ್ತು ಚರ್ಚೆಗಳ ಮೂಲಕ ಕಲಿಯಲು ಅವಕಾಶವನ್ನು ನೀಡುತ್ತವೆ. ಇದು ಸಾಂಪ್ರದಾಯಿಕ ಶಿಕ್ಷಕ-ನೇತೃತ್ವದ ತರಗತಿಗಳ ಬದಲಿಗೆ ಸ್ಥಳೀಯವಾಗಿ ಲಭ್ಯವಿರುವ ವಸ್ತು ಮತ್ತು ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನೂ ಮತ್ತು ಅಭ್ಯಾಸ ಹಾಳೆಗಳ ಬದಲು ವಾಸ್ತವಿಕ ಅನುಭವಗಳನ್ನು ಬಳಕೆ ಮಾಡಲು ಶಿಕ್ಷಕರನ್ನು ಪ್ರೋತ್ಸಾಹಿಸುತ್ತದೆ. ಈ ಅಭ್ಯಾಸ ಹಾಳೆಗಳು ಮಕ್ಕಳಿಗೆ ತಾವು ಕಣ್ಣಿಂದ ಕಂಡ ನೆನಪಿನಲ್ಲಿರುವುದನ್ನು ತರಗತಿಯಲ್ಲಿ ಕಲಿತ ವಿಷಯಗಳನ್ನು ಮತ್ತು ಅವರ ಹಿಂದಿನ ಅನುಭವಗಳನ್ನು ಪರಸ್ಪರ ಹೊಂದಿಸಿಕೊಳ್ಳುವ ಅವಕಾಶವನ್ನು ಒದಗಿಸುತ್ತದೆ.

ಪ್ರತಿ ಹಂತಕ್ಕೆ ತಕ್ಕ ಫಲಿತಾಂಶಗಳನ್ನು ಪ್ರದರ್ಶಿಸುವ ವಿನೋದಕರ ಕಲಿಕೆಯ ಸಲುವಾಗಿ, ಮಕ್ಕಳ ವೈವಿಧ್ಯಮಯ ಸಾಮರ್ಥ್ಯಗಳಿಗೆ ತಕ್ಕ ಅವಕಾಶಗಳನ್ನು ಒದಗಿಸಲು ಮಾದರಿ ಅಭ್ಯಾಸ ಹಾಳೆಗಳನ್ನು ತಯಾರಿಸಲಾಗಿದೆ. NEP 2020 ರಲ್ಲಿ ಸೂಚಿಸಿದಂತೆ, ಶಿಕ್ಷಣದ ಗಮನವು ಕೇವಲ ವಿಷಯವನ್ನು ವರ್ಗಾವಣೆ ಮಾಡುವ ಬದಲು ಸಾಮರ್ಥ್ಯದ ಅಭಿವೃದ್ಧಿಯ ಮೇಲೆ ಇರಬೇಕು. ನಿಯಮಿತವಾದ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಜೊತೆಗೆ ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ, ಸಮಸ್ಯೆಗಳನ್ನು ಪರಿಹರಿಸುವ ಕೌಶಲ್ಯ, ಸಂಭಾಷಣಾ ಕೌಶಲ್ಯ, ಸೃಜನಶೀಲತೆ, ಪರಾನುಭೂತಿ ಇತ್ಯಾದಿಗಳನ್ನು ಬೆಳೆಸುವುದು ಈಗಿನ ಸಮಯದಲ್ಲಿ ಅತ್ಯಗತ್ಯವಾಗಿದೆ, ಆದ್ದರಿಂದ ಕಲಿಕೋಪಕರಣಗಳನ್ನು ವಿನ್ಯಾಸಗೊಳಿಸುವಲ್ಲಿ ಬದಲಾವಣೆ ಅಗತ್ಯವಿದೆ. ಎಲ್ಲಾ ಕ್ಷೇತ್ರದ ಬೆಳವಣಿಗೆಯನ್ನು ಏಕಕಾಲದಲ್ಲಿ ತರುವಲ್ಲಿ ಮೂಲಭೂತ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು(NCF-FS 2022) ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ, ಆದ್ದರಿಂದ ಅದರ ಸಂಯೋಜನೆ ಹಾಗೂ ವಿನ್ಯಾಸ ಪ್ರಮುಖವಾಗಿದೆ. NCF-FS ನಲ್ಲಿ ಉಲ್ಲೇಖಿಸಿದಂತೆ, ಮಕ್ಕಳಿಗೆ ಶೈಕ್ಷಣಿಕ ವಿಷಯ ಮತ್ತು ದೃಶ್ಯ ಚಿತ್ರಗಳನ್ನು ರೂಪಿಸಲು 'ಪಂಚಕೋಶ'ಕ್ಕೆ ಪ್ರಾಮುಖ್ಯತೆ ಕೊಡಲಾಗಿದೆ. ಇದರ ಮೂಲಕ ದೈಹಿಕ ಬೆಳವಣಿಗೆ (ಅನ್ನಮಯ ಕೋಶ), ಜೀವನ ಶಕ್ತಿ (ಪ್ರಾಣಮಯ ಕೋಶ), ಭಾವನಾತ್ಮಕ ಬೆಳವಣಿಗೆ (ಮನೋಮಯ ಕೋಶ), ಅರಿವಿನ

© NCERT not to be republished

ಬೆಳವಣಿಗೆ (ವಿಜ್ಞಾನಮಯ ಕೋಶ) ಮತ್ತು ಪರಮಾನಂದ ಭಾವದ ಬೆಳವಣಿಗೆಗಳನ್ನು (ಆನಂದಮಯ ಕೋಶ) ಏಕ ಕಾಲದಲ್ಲಿ ಗಮನಿಸಬಹುದು.

ಈ ಅಭ್ಯಾಸ ಹಾಳೆಗಳು ಮಕ್ಕಳನ್ನು ಶಾಲೆಯಲ್ಲಿನ ಕಲಿಕಾ ಪದ್ಧತಿಗೆ ಸಿದ್ಧರಾಗಲು ಉತ್ತೇಜಿಸುತ್ತದೆ ಮತ್ತು ಅವರು ಔಪಚಾರಿಕ ಶಾಲಾ ವ್ಯವಸ್ಥೆಯನ್ನು ಪ್ರವೇಶಿಸಲು ಅಗತ್ಯವಿರುವ ಮೂಲ ಭಾಷೆ ಮತ್ತು ಅರಿವಿನ ಕೌಶಲ್ಯಗಳ ಬಗೆಗಿನ ತಿಳುವಳಿಕೆಯನ್ನು ಖಚಿತಪಡಿಸುತ್ತದೆ. ಮಕ್ಕಳಲ್ಲಿ ಸುಗಮ ಪರಿವರ್ತನೆಗಳಾಗಿ, ತಮ್ಮ ವಯಸ್ಸಿಗೆ ಸೂಕ್ತವಾದ ಚಟುವಟಿಕೆಗಳನ್ನು ನಿರ್ವಹಿಸಲು, ಅವರು ಮುಂಚಿತವಾಗಿ ಈ ಕೌಶಲಗಳನ್ನು ಪಡೆದುಕೊಳ್ಳುವ ಅಗತ್ಯವಿದೆ. ಈ ಅಭ್ಯಾಸ ಹಾಳೆಗಳು ಮಕ್ಕಳಲ್ಲಿ ಆರೋಗ್ಯಕರ ಮತ್ತು ಸುರಕ್ಷಿತ ಅಭ್ಯಾಸಗಳನ್ನು ಬೆಳೆಸಲು, ಸಂವೇದನಾ ಗ್ರಹಿಕೆಗಳನ್ನು ಹೆಚ್ಚಿಸಲು, ಉತ್ತಮ ಮತ್ತು ಸದೃಢ ದೇಹವನ್ನು ನಿರ್ಮಿಸಲು, ಭಾವನಾತ್ಮಕ ಬುದ್ಧಿವಂತಿಕೆ, ತಾರ್ಕಿಕ ಚಿಂತನೆ ಮತ್ತು ಕಲಾತ್ಮಕ ಅಭಿವ್ಯಕ್ತಿಯನ್ನು ಬೆಳೆಸಲು ಸಹಾಯಕವಾಗಿವೆ.

ಈ ಅಭ್ಯಾಸ ಹಾಳೆಗಳು ಮಕ್ಕಳಲ್ಲಿ ಉತ್ತಮ ಚಲನಾ ಕೌಶಲ್ಯ, ತಾರ್ಕಿಕ ಚಿಂತನೆ ಮತ್ತು ಸ್ವಯಂ ಕಲಿಕೆಯನ್ನು ಬೆಳೆಸಲು ಸಹಾಯ ಮಾಡುತ್ತದೆ. ಈ ಮಾದರಿ ಅಭ್ಯಾಸ ಹಾಳೆಗಳು ಮಕ್ಕಳ ಸಾಮರ್ಥ್ಯಗಳನ್ನು ಆಧರಿಸಿದ್ದು(NCF-FS, 2022 ರಲ್ಲಿ ನೀಡಿರುವಂತೆ), ಶಿಕ್ಷಕರು ಮತ್ತು ಪೋಷಕರಿಗೆ ಮಕ್ಕಳ ಕಲಿಕೆಯನ್ನು ಗುರುತಿಸಲು ಸಹಾಯಕವಾಗುವ ಸಲಹೆಗಳು, ಆಲೋಚನೆಗಳು ಮತ್ತು ಪ್ರಶ್ನೆಗಳನ್ನು ಹೊಂದಿವೆ.

**ಅಭ್ಯಾಸ ಹಾಳೆಗಳನ್ನು ಬಳಸುವುದು ಹೇಗೆ? (ಶಿಕ್ಷಕರು/ಹಿರಿಯರಿಗಾಗಿ):**

- ಶಿಶುವಿಹಾರಕ್ಕಾಗಿ ವಿನ್ಯಾಸಗೊಳಿಸಲಾದ (ಬೆಳವಣಿಗೆಯ ಎಲ್ಲಾ ಐದು ಕ್ಷೇತ್ರಗಳನ್ನು ಪೂರೈಸುವ) ಈ ಅಭ್ಯಾಸ ಹಾಳೆಗಳನ್ನು ಕತ್ತರಿಸಿ ಸುಲಭವಾಗಿ ಉಪಯೋಗಿಸಬಹುದು. ಹೀಗೆ ಪುಸ್ತಕದಿಂದ ಬೇರ್ಪಡಿಸಿ ಉಪಯೋಗಿಸಿದ ಅಭ್ಯಾಸ ಹಾಳೆಗಳನ್ನು ಮಕ್ಕಳ ಬಳಿ  ಇರುವ ಪೆಟ್ಟಿಗೆ ಅಥವಾ ಚೀಲದಲ್ಲಿಡಬೇಕು. ಅವರ ಕಲಿಕೆಯನ್ನು ಮೌಲ್ಯಮಾಪನ ಮಾಡಲು ಸಹಾಯಕವಾಗುವುದು. ಹೀಗೆ ಬೇರ್ಪಡಿಸುವುದು ಮಕ್ಕಳು ಇತರ ಹಾಳೆಗಳ ಬಗ್ಗೆ ಗಾಬರಿಗೊಳ್ಳದೆ ಅಭ್ಯಾಸದ ವೇಳೆಯಲ್ಲಿ ಹಾಳೆಯ ಮೇಲೆ ಗಮನಹರಿಸಲು ಸಹಾಯಕವಾಗುತ್ತದೆ.
- ವಿಭಿನ್ನ ಕ್ಷೇತ್ರಗಳ ಸಮಗ್ರ ಕಲಿಕೆಯನ್ನು ಖಚಿತಪಡಿಸಲು ಇದೇ ಮಾದರಿಯ ಅಭ್ಯಾಸ ಹಾಳೆಗಳನ್ನು ರೂಪಿಸಬಹುದು.
- ಅಭ್ಯಾಸ ಹಳೆಗಳನ್ನು ಉದಾರಣೆಯಾಗಿ ತೆಗೆದುಕೊಂಡು ಶಿಕ್ಷಕರು ವಿವಿಧ ವಿಷಯಗಳ ಆಧಾರದ ಮೇಲೆ ಹೆಚ್ಚಿನ ಚಟುವಟಿಕೆಗಳನ್ನು ಯೋಜಿಸಬಹುದು. ಉದಾಹರಣೆಗೆ, ಕೊಟ್ಟಿರುವ ಅಭ್ಯಾಸ ಹಾಳೆಯಲ್ಲಿ ವಸ್ತುಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು ಅಥವಾ ಆಕಾರವನ್ನು ಬದಲಿಸಬಹುದು.
- ಅಭ್ಯಾಸದ ಹಾಳೆಗಳನ್ನು ಬಳಸುವ ಮೊದಲು ಅಥವಾ ಬಳಸುವಾಗ ಸಾಧ್ಯವಿರುವಲ್ಲೆಲ್ಲಾ ಸ್ಥಳೀಯ ಸಂಪನ್ಮೂಲಗಳು ಮತ್ತು ವಸ್ತುಗಳನ್ನು ಬಳಸಿ ಪ್ರಕೃತಿಯ  ಪರಿಕಲ್ಪನೆಯನ್ನು ಪರಿಚಯಿಸಿ. ಉದಾಹರಣೆಗೆ, ಎಲೆಗಳನ್ನು ಉಪಯೋಗಿಸಿ ಆಕೃತಿಗಳನ್ನು ರಚಿಸುವುದು, ಒಣಗಿದ ಹೂವುಗಳು, ಕೊಂಬೆಗಳಿಂದ ರಂಗೋಲಿ ಮಾಡುವುದು ಇತ್ಯಾದಿ.
- ನಿಮ್ಮ ಪ್ರದೇಶಕ್ಕೆ ತಕ್ಕ ನೈಜ/ ವಾಸ್ತವಿಕ ವಸ್ತುಗಳು, ಕಥೆಗಳು ಮತ್ತು ಉದಾಹರಣೆಗಳನ್ನು ಬಳಸಿ ಮತ್ತು ಮಗುವಿನ ಜೀವನಕ್ಕೆ ಸಂಬಂಧಿಸುವಂತೆ ಅವುಗಳನ್ನು ಸಂದರ್ಭೋಚಿತವಾಗಿ ರೂಪಿಸಿ. ಉದಾಹರಣೆಗೆ, ಪ್ರಾಣಿಗಳ ಮೇಲೆ ವರ್ಕ್‌ಶೀಟ್ ಮಾಡುವ ಮೊದಲು, ಜಾನಪದ, ಪ್ರಾದೇಶಿಕ ಪ್ರಾಸಗಳು/ಹಾಡುಗಳನ್ನು ಸೇರಿಸಿ,  ಮಕ್ಕಳು ತಮ್ಮ ಸುತ್ತಮುತ್ತಲಿನ ಅಥವಾ ಮೃಗಾಲಯದಲ್ಲಿ ನೋಡುವ ಪ್ರಾಣಿಗಳು, ಅವರ ಮನೆಯಲ್ಲಿರುವ ಸಾಕುಪ್ರಾಣಿಗಳು ಇತ್ಯಾದಿಗಳ ಬಗ್ಗೆ ಕೇಳಿ ಮುಂದುವರೆಯುವುದರಿಂದ ಮಕ್ಕಳು ತಮ್ಮ ವಾಸ್ತವಿಕ ಅನುಭವಗಳನ್ನು ಕಲಿಕೆಯೊಂದಿಗೆ ಅರ್ಥೈಸಿಕೊಳ್ಳುವರು.
- ಚಟುವಟಿಕೆಯ ಕೊನೆಯಲ್ಲಿನ ಔಪಚಾರಿಕ ಸಂಕಲನಾತ್ಮಕ ಮೌಲ್ಯಮಾಪನಕ್ಕಿಂತ ಹೆಚ್ಚಾಗಿ ಮಗುವಿನ ಕಾರ್ಯಕ್ಷಮತೆಯನ್ನು ರಚನಾತ್ಮಕ ರೀತಿಯಲ್ಲಿ ನಿರ್ಣಯಿಸಲು ಅಭ್ಯಾಸ ಹಾಳೆಗಳು ಶಿಕ್ಷಕರಿಗೆ ಉಪಯುಕ್ತವಾಗಿವೆ. ಹಾಗಾಗಿ ಚರ್ಚೆಯ ಸಮಯದಲ್ಲಿ/ ತರಗತಿಯಲ್ಲಿ ಚಟುವಟಿಕೆಯ ಪ್ರದರ್ಶನ ಮಾಡುವಾಗ ಮಕ್ಕಳನ್ನು ಗಮನಿಸಿ ಮತ್ತು ಅವರ ಕಲಿಕೆಯ ಅಂತರವನ್ನು ಗುರುತಿಸಿ ಮತ್ತು ಅದಕ್ಕೆ ಅನುಗುಣವಾಗಿ ಅನುಕೂಲ ಮಾಡಿಕೊಡಿ.

© NCERT not to be republished

- ಅಭ್ಯಾಸ ಹಾಳೆಗಳನ್ನು ಬಳಕೆ ಮಾಡುವ ಮೊದಲು ಮಕ್ಕಳಿಗೆ ಸೃಜನಶೀಲತೆ ಮತ್ತು ಸ್ವಾತಂತ್ರ್ಯವನ್ನು ಬೆಳೆಸಿಕೊಳ್ಳಲು ಹಾಗು ವಿಷಯಗಳ ಪರಿಶೋಧನೆಗೆ, ವಾಸ್ತವಿಕ ಅನುಭವಗಳಿಗೆ ಅವಕಾಶ ನೀಡಿ. ವಿಷಯಗಳ ಬಗ್ಗೆ ಮಕ್ಕಳು ತಮ್ಮದೇ ಆದ ಆಲೋಚನೆಗಳನ್ನು ರೂಪಿಸಲು ಅವಕಾಶ ಮಾಡಿಕೊಡಿ. ಪ್ರತಿ ಮಗುವೂ ತನ್ನದೇ ಆದ ವೇಗದಲ್ಲಿ ಕೆಲಸ ಮಾಡಲು ಬಿಡಿ.
- ಸಂವಾದಾತ್ಮಕ ತರಗತಿಯನ್ನು ನಡೆಸುವ ಮೂಲಕ ಸಾಮಾಜಿಕ-ಭಾವನಾತ್ಮಕ ಬೆಳವಣಿಗೆಯನ್ನು ಉತ್ತೇಜಿಸಿ ಹಾಗೂ ಮಕ್ಕಳ ನಡುವೆ ಮತ್ತು ಮಗು ಮತ್ತು ಶಿಕ್ಷಕರ ನಡುವೆ ಸಾಧ್ಯವಾದಷ್ಟು ಸಂಭಾಷಣೆಗಳಿಗೆ ಉತ್ತೇಜನೆ ನೀಡಿ.
- ಮಕ್ಕಳಿಗಾಗಿ ಹಿತವೆನಿಸುವ, ಮೆಚ್ಚುಗೆ ಮತ್ತು ಸಕಾರಾತ್ಮಕ ಪದಗಳನ್ನು ಬಳಸಿ ಮತ್ತು ಅವರಿಗೆ ತಮ್ಮ ಇರುವಿಕೆಗೆ ಹಾಗು ಮಾತಿಗೆ ಪ್ರಾಮುಖ್ಯತೆ ನೀಡಲಾಗಿದೆ ಎಂಬ ಭಾವನೆ ಮೂಡಿಸಿ. ಉದಾಹರಣೆಗೆ, ಮಕ್ಕಳು ರಚಿಸಿದ ರೇಖಾಚಿತ್ರಗಳು, ಚಾರ್ಟ್‌ಗಳನ್ನು ತರಗತಿಯ ಗೋಡೆಗಳು, ಶಿಶುವಿಹಾರದ ಕಾಲುದಾರಿಗಳು, ಚಾವಡಿಗಳು ಇತ್ಯಾದಿಗಳಲ್ಲಿ ಪ್ರಸ್ತುತಪಡಿಸಿ.
- ವಿಶೇಷ ಅಗತ್ಯತೆಗಳಿರುವ ಮಕ್ಕಳಿಗಾಗಿ ಈ ಅಭ್ಯಾಸ ಹಾಳೆಗಳ, ವಿಶೇಷ ನಿಬಂಧನೆಗಳು ಮತ್ತು ಅವಶ್ಯಕತೆಗೆ ತಕ್ಕಂತೆ ಬದಲಾಯಿಸಿರುವ ಆವೃತ್ತಿಗಳನ್ನು ತಯಾರಿಸಿಕೊಳ್ಳಿ, ಉದಾಹರಣೆಗೆ, ಮಕ್ಕಳಿಗೆ ಬರೆಯುವ ಪರಿಕರಗಳನ್ನು ಹಿಡಿದುಕೊಳ್ಳುವಲ್ಲಿ ಸಮಸ್ಯೆಯಿದ್ದರೆ ಅಂಟಿಚೀಟಿಗಳನ್ನು ಬಳಸಲು ಅನುಮತಿಸಿ, ಅವರು ದೃಷ್ಟಿಹೀನರಾಗಿದ್ದರೆ ಚಿತ್ರಗಳ ಅಡಿಯೊ ವಿವರಣೆ ಇತ್ಯಾದಿಯನ್ನು ಒದಗಿಸಿ.
- ಧನಾತ್ಮಕ ಅಭ್ಯಾಸಗಳನ್ನು ಬೆಳೆಸಲು ತಮ್ಮ ವಸ್ತುಗಳನ್ನು ಗೊತ್ತುಪಡಿಸಿದ ಸ್ಥಳದಲ್ಲಿಯೇ ಇರಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. ಅಲ್ಲದೆ, ಅಭ್ಯಾಸ ಹಾಳೆಗಳನ್ನು ಪೂರ್ಣಗೊಳಿಸಿದ ನಂತರ ಬಳಸಿದ ವಸ್ತುಗಳನ್ನು (ಬಣ್ಣಗಳು, ಕುಂಚಗಳು, ವಸ್ತುಗಳು, ಇತ್ಯಾದಿ) ಹಿಂತಿರುಗಿಸಲು ಹೇಳಿ.
- ಒಂದು ಚಟುವಟಿಕೆಯಿಂದ ಇನ್ನೊಂದಕ್ಕೆ ತೆರಳುವ ನಡುವೆ ಪ್ರಾಸಗಳು ಮತ್ತು ಹಾಡುಗಳನ್ನು ಪುನರಾವರ್ತಿಸಿ, ಹಾಗು ಅವರಲ್ಲಿ ಸಮನ್ವಯ ಭಾವ ಮತ್ತು ದೇಹದ ಸಡಿಲವಾದ ಚಲನೆಯನ್ನು ಬೆಳೆಸಲು ಸಾಧ್ಯವಾದಾಗಲೆಲ್ಲಾ ನೃತ್ಯ ಮತ್ತು ಕ್ರಿಯೆಗಳನ್ನು ಸೇರಿಸಿ.

ಇಲ್ಲಿ ನೀಡಲಾದ ಅಭ್ಯಾಸ ಹಾಳೆಗಳನ್ನು ಶಿಕ್ಷಕರು/ಪೋಷಕರಿಗೆ ಮಾದರಿಯಾಗಿ ನೀಡಲಾಗಿದೆಯೇ ಹೊರತು ಯಾವುದೇ ರೀತಿಯಲ್ಲಿ ಇದು ಸಂಪೂರ್ಣ/ನಿಗದಿತ ಪಠ್ಯಪುಸ್ತಕವಾಗಿ ಕಾರ್ಯನಿರ್ವಹಿಸುವುದಿಲ್ಲ. ಈ ಪುಸ್ತಕವು ಅಭ್ಯಾಸ ಹಾಳೆಗಳನ್ನು ಮಕ್ಕಳ ಸಂದರ್ಭ ಮತ್ತು ಅಗತ್ಯಗಳ ಆಧಾರದ ಮೇಲೆ ಕಲ್ಪಿಸಲು, ಸೇರಿಸಲು ಅಥವಾ ಬಿಟ್ಟುಬಿಡಲು ಸ್ವಾತಂತ್ರ್ಯವನ್ನು ಒದಗಿಸುತ್ತದೆ. ಅಭ್ಯಾಸ ಹಾಳೆಗಳನ್ನು ಮಾಡುವಾಗ ಮನೆ ಮತ್ತು ತರಗತಿಯ ಭಾಷಾ ಬಳಕೆಯ ನಡುವೆ ಹೊಂದಾಣಿಕೆ ಇರಬೇಕು ಮತ್ತು ಮಕ್ಕಳಲ್ಲಿ ಆನಂದದ ಭಾವವನ್ನು ಸೃಷ್ಟಿಸಬೇಕು.

❄ ❄ ❄

© NCERT not to be republished

© NCERT
not to be republished

# ಪರಿವಿಡಿ


ಮುನ್ನುಡಿ *v*
ಅಭಿವೃದ್ಧಿಪಡಿಸಿದ ತಂಡ *vii*
ಕೃತಜ್ಞತೆಗಳು *viii*
ಚಟುವಟಿಕೆ ಪುಸ್ತಕದ ಸುತ್ತ ix
ಕಾರ್ಯಹಾಳೆಗಳೊಂದಿಗಿನ ಸಹಾಯ xiv
ಮಕ್ಕಳಿಗಾಗಿ ಕಾರ್ಯಹಾಳೆ 1–93


© NCERT not to be republished



© NCERT
not to be republished

# ಕಾರ್ಯಹಾಳೆಗಳೊಂದಿಗಿನ ಸಹಾಯ

ಈ ಕೆಳಗಿನ ಪುಟಗಳನ್ನು ಶಿಕ್ಷಕರು ಮಕ್ಕಳಿಗೆ ಸಹಾಯ ಮಾಡಲು ಕಾರ್ಯಹಾಳೆಗಳೊಂದಿಗೆ ಕೊಡಲಾಗಿದೆ, ಆದರೆ ಇವುಗಳನ್ನು ಮಕ್ಕಳ ಬೇಕು-ಬೇಡ ಹಾಗೂ ಆಸಕ್ತಿಗಳಿಗೆ ಅನುಗುಣವಾಗಿ ಬದಲಾಯಿಸಿಕೊಳ್ಳಬಹುದು. ಪ್ರತಿ ಕಾರ್ಯಹಾಳೆಯ ಬದಿಯಲ್ಲಿ ಕೆಲವು ವಿನ್ಯಾಸಗಳು/ಮಾದರಿಗಳನ್ನು ನೀಡಲಾಗಿದೆ. ಮಕ್ಕಳು ಕಾರ್ಯಹಾಳೆಯನ್ನು ಮುಗಿಸಿದ ನಂತರ ಈ ವಿನ್ಯಾಸಗಳನ್ನು ಪೂರ್ಣಗೊಳಿಸಲು ಪ್ರೇರೇಪಿಸಬೇಕು.



**ಚಟುವಟಿಕೆ 1: ನನ್ನ ಚಿತ್ರಪಟ**

ಮಕ್ಕಳಿಗೆ ತಮ್ಮ ಮುಖದ ಭಾಗಗಳನ್ನು ಬಿಡಿಸಿ, ಅದರಲ್ಲಿ ಬಣ್ಣ ತುಂಬಲು ಪ್ರೇರೇಪಿಸಬೇಕು. ತದನಂತರ ತಮ್ಮ ಚಿತ್ರಪಟವನ್ನು ಬಿಡಿಸಿ ಅದರಲ್ಲೂ ಬಣ್ಣ ಬಣ್ಣದ ಬಳಪವನ್ನು ಬಳಸಿ ಬಣ್ಣ ತುಂಬಲು ಹೇಳಬೇಕು.



**ಚಟುವಟಿಕೆ 2: ನಾನು ಮತ್ತು ನನ್ನವರು!**

ಮಕ್ಕಳಿಗೆ ತಮ್ಮ ಬಗ್ಗೆ ಹಾಗೂ ತಮ್ಮ ಕುಟುಂಬದ ಬಗ್ಗೆ ಮಾತನಾಡಲು ಬಿಡುವುದು. ಹಾಗೆಯೇ ಮಕ್ಕಳಿಗೆ ತಮ್ಮ ಕುಟುಂಬದ ಚಿತ್ರವನ್ನು ಕೊಟ್ಟಿರುವ ಸ್ಥಳದಲ್ಲಿ ಅಂಟಿಸಲು ಹೇಳುವುದು. ಅಷ್ಟಲ್ಲದೇ ಮಕ್ಕಳಿಗೆ ಖಾಲಿ ಬಿಟ್ಟಿರುವ ಜಾಗದಲ್ಲಿ ತಮಗೆ ಇಷ್ಟವಾದ ಬಣ್ಣವನ್ನು ತುಂಬಲು ಹಾಗೂ ಇಷ್ಟವಾದ ಆಕಾರಗಳನ್ನು ಬರೆಯಲು ಪ್ರೇರೇಪಿಸುವುದು. ಇದರ ಜೊತೆಗೆ ಮಕ್ಕಳಲ್ಲಿ "ನಾನು" ಎಂಬ ಪದ್ಯವನ್ನು ಕೈ ಸನ್ನೆಯ ಮೂಲಕ ಹೇಳಿಸುವುದು.



**ಚಟುವಟಿಕೆ 3: ತಮ್ಮ ಬಗೆಗಿನ ಅರಿವಳಿಕೆ**

ಮಕ್ಕಳಿಗೆ ತಾವು ಕುಟುಂಬದ ಭಾಗವೆಂದು ಜೊತೆಗೆ ಕುಟುಂಬದ ಪ್ರತಿಯೊಬ್ಬ ಸದಸ್ಯರು ತಮ್ಮದೇ ಆದ ಒಂದು ವಿಶಿಷ್ಟ ಪಾತ್ರವನ್ನು ನಿರ್ವಹಿಸುತ್ತಾರೆಂದು ತಿಳಿಯಲು ಸಹಾಯ ಮಾಡುವುದು. ಅಲ್ಲದೆ ಮಕ್ಕಳಿಗೆ ತಮ್ಮ ಕುಟುಂಬದಲ್ಲಿ ಇರುವಂತಹ ಸಂಸ್ಕಾರ ಮತ್ತು ಸಂಸ್ಕೃತಿಗಳನ್ನು ಮುಂದುವರಿಸಿಕೊಂಡು ಹೋಗಲು ಸಹಾಯವಾಗುವಂತೆ ತಿಳಿವಳಿಕೆಯನ್ನು ನೀಡುವುದು.



**ಚಟುವಟಿಕೆ 4: ನನ್ನ ಕುಟುಂಬ ಮತ್ತು ನನ್ನ ಸ್ನೇಹಿತರು**

ಮಕ್ಕಳಿಗೆ ಚಿತ್ರಪಟದಲ್ಲಿರುವ ಚಿತ್ರವನ್ನು ಗಮನಿಸಿ ಮಾತಾಡಲು ಪ್ರೇರೇಪಿಸುವುದು. ಉದಾಹರಣೆಗೆ, 'ಚಿತ್ರದಲಾಗುತ್ತಿರುವ ಘಟನೆ ಏನು?' ಎಂದು ಪ್ರಶ್ನಿಸುವುದು. ಇದಕ್ಕೆ ಮಕ್ಕಳು ಚಿತ್ರವನ್ನು ಗಮನಿಸಿ ಸವಿಸ್ತಾರವಾಗಿ ಉತ್ತರಿಸಲು ಸಹಾಯ ಮಾಡುವುದು. ತದನಂತರ ಚಿತ್ರದಲ್ಲಿರುವಂತೆಯೇ ತಾವು ತಮ್ಮ ಕುಟುಂಬದ ಜೊತೆಗೆ ಬೇರೆಯವರ ಮನೆಗೆ ಹೋಗುವಿರೇ? ಎಂದು ಪ್ರಶ್ನಿಸುವುದು. ಬೇರೆಯವರ ಮನೆಗೆ ಹೋದೊಡನೆ ಅವರೊಡನೆ ಹೇಗೆ ಕ್ಷೇಮ (ಕುಶಲ) ಸಮಾಚಾರಗಳನ್ನು ಪ್ರಶ್ನಿಸುವಿರಿ? ನಿಮಗೆ ಯಾರ ಮನೆಗೆ ಹೋಗಲು ಬಹಳ ಇಷ್ಟ? ಯಾರಾದರೂ ನಿಮ್ಮನ್ನು ಪರಿಚಯಿಸಿಕೊಳ್ಳಲು ಹೇಳಿದರೆ ಹೇಗೆ ಪರಿಚಯಿಸಿಕೊಳ್ಳುತ್ತೀರಿ? ಚಿತ್ರಪಟದಲ್ಲಿರುವ ಹುಡುಗಿ ಅತಿಥಿಗಳಿಗೆ ಏನನ್ನುತ್ತಿದ್ದಾಳೆಂದು ನೀವು ಭಾವಿಸುವಿರಿ? ಕೊಟ್ಟಿರುವ ಚಿತ್ರಪಟದಂತೆಯೇ ಬೇರೆ ಬೇರೆಯ ವಿಷಯಾನುಸಾರ ಚಿತ್ರ

© NCERT not to be republished

ಪಟಗಳನ್ನು ಸೃಷ್ಟಿಸುವುದು. ಚಿತ್ರವನ್ನು ಗಮನಿಸಿದ ನಂತರ ಮಕ್ಕಳಿಗೆ ಚಿತ್ರದಲ್ಲಿರುವಂತಹ ಜನರ ಸಂಖ್ಯೆಯನ್ನು, ಅತಿಥಿಗಳ ಸಂಖ್ಯೆಯನ್ನು ಲೆಕ್ಕ ಹಾಕಲು ಹೇಳುವುದು ಹಾಗೂ ಅವರ ಅಂಗಿಗಳಲ್ಲಿರುವಂತಹ ಸಾಮ್ಯತೆಗಳನ್ನು ಗಮನಿಸಲು ಹೇಳುವುದು.



**ಚಟುವಟಿಕೆ 5: ಸಮಾನ ವಸ್ತುಗಳನ್ನು ಪತ್ತೆ ಹಚ್ಚುವುದು**

ಪ್ರತಿ ಸಾಲಿನಲ್ಲಿರುವ ವಸ್ತುಗಳನ್ನು ಮಕ್ಕಳು ಗುರುತಿಸುವುದು. ಇದಕ್ಕೆ ಸರಿಯಾಗಿ ಹೊಂದುವ ಚಿತ್ರಗಳನ್ನು ಪಕ್ಕದಲ್ಲಿಟ್ಟಿರುವ ಡಬ್ಬದಿಂದ ಆರಿಸಿ ತೆಗೆದು ಅದಕ್ಕೆ ಬಣ್ಣವನ್ನು ಹಚ್ಚುವುದು. ಹಾಗೆಯೇ ಮಕ್ಕಳಿಗೆ ಅಲ್ಲಿ ಗುರುತಿಸಲಾದ ಗೆರೆಗಳನ್ನು ಬಣ್ಣದ ಬಳಪಗಳಿಂದ ತುಂಬಲು ಹೇಳುವುದು.



**ಚಟುವಟಿಕೆ 6: ಪಕ್ಷಿಯ ಚಿತ್ರವನ್ನು ಸಂಪೂರ್ಣಗೊಳಿಸುವುದು**

ಕಾರ್ಯ ಹಾಳೆಯಲಿರುವ ಪಕ್ಷಿಯ ಚಿತ್ರವಿರುವುದು ಮಕ್ಕಳಿಗೆ ಹಕ್ಕಿ ಚಿತ್ರದ ಬಿತ್ತರಿಸಿದ ಗೀಟನ್ನು ಸೇರಿಸಿ ಬಣ್ಣ ಹಾಕಲು ಹೇಳುವುದು ಅಥವಾ ಕಾಗದದ ಚೂರುಗಳನ್ನು ಚಿತ್ರದಲ್ಲಿ ಅಂಟಿಸಲು ಹೇಳುವುದು. ಹಾಗೆಯೇ ಮಕ್ಕಳಿಗೆ 'ಹಕ್ಕಿ' ಎನ್ನುವ ಪದದ ಮೊದಲ ಶಬ್ದವನ್ನು ಹೇಳಿಸಿ ಅದನ್ನು ಗಮನಿಸುವಂತೆ ಹೇಳುವುದು. ತದನಂತರ ಅವರು ಸುತ್ತಲಿನ ಪರಿಸರದಲ್ಲಿ ಕಂಡು ಬರುವ ಹಕ್ಕಿಗಳನ್ನು ಹೆಸರಿಸಲು ಹೇಳುವುದು.



**ಚಟುವಟಿಕೆ 7: ನನ್ನ ಪಂಚೇಂದ್ರಿಯಗಳು**

ಮೊದಲು ಡಬ್ಬದಲ್ಲಿರುವ ವಸ್ತುಗಳನ್ನು ಮಕ್ಕಳು ಗುರುತಿಸಿ ತದನಂತರ ಅದನ್ನು ಬಲಭಾಗದಲ್ಲಿಟ್ಟಿರುವ ಡಬ್ಬದಲ್ಲಿರುವ ಪಂಚೇಂದ್ರಿಯ ಚಿತ್ರಗಳಿಗೆ ಹೋಲಿಸುವುದು. ಇದರೊಂದಿಗೆ, ಮಕ್ಕಳಿಗೆ ಪಂಚೇಂದ್ರಿಯಗಳ ಬಗ್ಗೆ ಮಾತನಾಡಲು ಪ್ರೇರೇಪಿಸುವುದು ಹಾಗೂ ಪಂಚೇಂದ್ರಿಯಗಳ ಬಗೆಗಿನ ಒಂದು ಪದ್ಯವನ್ನು ಹೇಳಿಸುವುದು.



**ಚಟುವಟಿಕೆ 8: ನನ್ನ ಮತ್ತು ನನ್ನ ಶಾಲೆಯ ಸ್ವಚ್ಛತೆಯನ್ನು ಕಾಪಾಡುವುದು**

ರೋಗಾಣುಗಳಿಂದ ದೂರವಿರಲು ಹಾಗೆ ಸುಂದರವಾಗಿ ಕಾಣಲು ನಾವು ನಮ್ಮನ್ನು ಹಾಗೂ ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಸ್ವಚ್ಛವಾಗಿ ಇಡಬೇಕೆಂದು ಮಕ್ಕಳಿಗೆ ಮನವರಿಕೆ ಮಾಡಿಕೊಡುವುದು. ಇಷ್ಟಲ್ಲದೆ ಶಾಲೆಯಲ್ಲಿ ಮತ್ತು ತರಗತಿಯಲ್ಲಿ ಸ್ವಚ್ಛತೆಯನ್ನು ಹೇಗೆ ಕಾಪಾಡಬೇಕೆಂದು ಮಕ್ಕಳೊಂದಿಗೆ ಸಂವಾದ ನಡೆಸುವುದು. ಕೊಟ್ಟಿರುವ ಚಿತ್ರಗಳಲ್ಲಿ ತಮ್ಮನ್ನು ತಾವು ಸ್ವಚ್ಛ ಮಾಡಿಕೊಳ್ಳಲು ಹಾಗೂ ಶಾಲೆಯನ್ನು ಸ್ವಚ್ಛವಾಗಿಡಲು ಬೇಕಾದ ವಸ್ತುಗಳನ್ನು ಮಕ್ಕಳು ಗುರುತಿಸುವಂತೆ ಮಾಡುವುದು.

© NCERT not to be republished



**ಚಟುವಟಿಕೆ 9: ಸುತ್ತಮುತ್ತಲಿನ ಪ್ರಾಣಿ-ಪಕ್ಷಿಗಳು**

'ನಾನು ನಿದ್ರೆ ಮಾಡುತ್ತಿದ್ದೆ' ಎನ್ನುವ ಪದ್ಯವನ್ನು ಮಕ್ಕಳಿಗೆ ತರಗತಿಯಲ್ಲಿ ಬಾಯಿ ಪಾಠ ಮಾಡಿಸುವುದು. ಇದರೊಂದಿಗೆ ಮಕ್ಕಳಿಗೆ ಹೊಸ ಹೊಸ ಪ್ರಾಣಿ ಪಕ್ಷಿಗಳ ಹೆಸರನ್ನು ಸೇರಿಸುತ್ತಾ ಅವು ಮಾಡುವ ಶಬ್ಧಗಳನ್ನು ಅನುಕರಣೆ ಮಾಡುವಂತೆ ಪ್ರೇರೇಪಿಸುವುದು. ಮಕ್ಕಳಲ್ಲಿ ಪ್ರಾಣಿ/ಪಕ್ಷಿಗಳ ಬಿತ್ತಿ ಚಿತ್ರಗಳನ್ನು ಹಾಗೂ ಬೊಂಬೆಗಳನ್ನು ಸುತ್ತಮುತ್ತಲೂ ಸಿಗುವ ವಸ್ತುಗಳಿಂದ ಮಾಡಲು ಹೇಳಿಕೊಡುವುದು. ಈ ಬಿತ್ತಿ ಚಿತ್ರಗಳು ಹಾಗೂ ಬೊಂಬೆಗಳಿಗೆ ಹಿನ್ನೆಲೆಯಾಗಿ ಕಥೆಯನ್ನು ಅಥವಾ ಪದ್ಯವನ್ನು ಮಕ್ಕಳಲ್ಲಿಯೇ ಸೃಷ್ಟಿಸುವುದು.



**ಚಟುವಟಿಕೆ 10: ನನ್ನ ಭಾವನೆಗಳು**

ಮಕ್ಕಳಿಗೆ ಸುತ್ತಮುತ್ತಲಿನ ಎಲ್ಲರಿಗೂ ಭಾವನೆಗಳಿರುತ್ತವೆ ಎಂದು ಮನವರಿಕೆ ಮಾಡಿಕೊಡುವುದು, ಹಾಗೆಯೇ ತಮ್ಮ ಭಾವನೆಗಳನ್ನು ಬಲಗೊಳಿಸಲು ಸಹಾಯ ಮಾಡುವುದು. ಅಂತೆಯೇ ಮಕ್ಕಳಿಗೆ ಕೊಟ್ಟಿರುವ ಭಾವನೆಗಳನ್ನು ಚಿತ್ರಪಟದಲ್ಲಿರುವಂತಹ ಭಾವನೆಗಳಿಗೆ ಹೊಂದಿಸುವುದು. ಭಾವನೆಗಳನ್ನು ಸುಭದ್ರಗೊಳಿಸಲು ಕೆಲವು ಚಟುವಟಿಕೆಗಳನ್ನು ಮಕ್ಕಳ ಕೈಯಲ್ಲಿ ಮಾಡಿಸುವುದು.



**ಚಟುವಟಿಕೆ 11: ಆರೋಗ್ಯಕರ ಆಹಾರಗಳು**

ಮಕ್ಕಳೊಂದಿಗೆ ಆರೋಗ್ಯಕರ ಮತ್ತು ಅನಾರೋಗ್ಯಕರವಾದ ಆಹಾರಗಳ ಬಗೆಗೆ ಚರ್ಚಿಸುವುದು. ಮಕ್ಕಳಿಗೆ ಪ್ರತಿ ಖಾದ್ಯಗಳನ್ನು (ತಿಂಡಿ-ತಿನಿಸು) ಗುರುತಿಸುವಂತೆ ಪ್ರೋತ್ಸಾಹಿಸುವುದು. ಮಕ್ಕಳಲ್ಲಿ ಪ್ರತಿನಿತ್ಯ ಹೆಚ್ಚು ತಿನ್ನುವ ಖಾದ್ಯವೇನೆಂದು ವಿಚಾರಿಸುವುದು. ಕೆಳಗೆ ಕೊಟ್ಟಿರುವ ಪ್ರತಿ ಸಾಲಿನಲ್ಲಿನ ಆರೋಗ್ಯಕರವಾದ ತಿನಿಸುಗಳನ್ನು ಗುರುತಿಸುವಂತೆ ಮಕ್ಕಳಿಗೆ ಹೇಳುವುದು.



**ಚಟುವಟಿಕೆ 12: ನನಗೆ ಪರಿಚಯವಿರುವ ಪ್ರಾಣಿಗಳು**

ಮಕ್ಕಳು ತಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿ ನೋಡಿರುವ ಪ್ರಾಣಿಗಳ ಬಗ್ಗೆ ಮಾತನಾಡಲು ಸಮಯ ಕೊಡುವುದು. ಮಕ್ಕಳು ಪ್ರತಿ ಪ್ರಾಣಿಯನ್ನು ಗುರುತಿಸಿ ಅದು ಮಾಡುವ ಶಬ್ದವನ್ನು ಅನುಕರಿಸಲು ಪ್ರೋತ್ಸಾಹಿಸುವುದು. ಮಕ್ಕಳಿಗೆ ಪ್ರತಿ ಪ್ರಾಣಿಯ ಮೇಲೆ ತಮ್ಮ ತೋರುಬೆರಳನ್ನಿರಿಸಿ ಅದರ ಹೆಸರಿನಲ್ಲಿರುವ ಮೊದಲ ಶಬ್ದವನ್ನು ಉಚ್ಚಾರಣೆ ಮಾಡುವಂತೆ ಹೇಳುವುದು. ಅವರಿಗೆ ಮೊದಲು ಹಳದಿ ಚುಕ್ಕಿಯಿಂದ ಪ್ರಾಣಿಗಳನ್ನು ಚಿತ್ರಿಸಲು ಶುರು ಮಾಡಿ ಕೆಂಪು ಚುಕ್ಕಿ ಕಡೆಗೆ ಹೋಗುವಂತೆ ತಿಳಿಸುವುದು. ಚುಕ್ಕಿಗಳನ್ನು ಸೇರಿಸುವಾಗಲೇ ಮಕ್ಕಳಿಗೆ ಕೊಟ್ಟಿರುವ ಪ್ರಾಣಿಗಳ ಆಹಾರವನ್ನು ಗುರುತಿಸಲು ಹೇಳುವುದು ಹಾಗೆ ಸಿಂಹದ ಆಹಾರವೇನೆಂದು ಯೋಚಿಸಲು ಹೇಳುವುದು.



**ಚಟುವಟಿಕೆ 13: ಗುಂಪಿಗೆ ಸೇರದ್ದನ್ನು ಗುರುತಿಸಿ**

ಪ್ರತಿಸಾಲಿನಲ್ಲಿರುವ ಚಿತ್ರಪಟವನ್ನು ಗುರುತಿಸಿ ಅದನ್ನು ಹೆಸರಿಸುವಂತೆ ಮಕ್ಕಳನ್ನು ಪ್ರೋತ್ಸಾಹಿಸುವುದು. ಹಾಗೆಯೇ ಎಲ್ಲದರಂತಿಲ್ಲದ ಚಿತ್ರಪಟವನ್ನು ಗುರುತಿಸುವಂತೆ ಹೇಳುವುದು ಮತ್ತು ಎಳೆಯಲಾದ ಸಾಲುಗಳನ್ನು ಜೋಡಿಸಲು ಹೇಳುವುದು.

© NCERT not to be republished



**ಚಟುವಟಿಕೆ 14: ಸಣ್ಣ ಮತ್ತು ದೊಡ್ಡ ವಸ್ತುಗಳು**

ದೊಡ್ಡ ಮತ್ತು ಸಣ್ಣ ಛತ್ರಿ, ಚೆಂಡುಗಳಂತೆ ದೊಡ್ಡ ಮತ್ತು ಸಣ್ಣ ವಸ್ತುಗಳನ್ನು ಗುರುತಿಸಿ ಹೆಸರಿಸಲು ಮಕ್ಕಳಿಗೆ ಸಹಾಯ ಮಾಡುವುದು. ಹಾಗೆಯೇ ದೊಡ್ಡ ವಸ್ತುಗಳನ್ನು ಕೆಂಪು ಬಣ್ಣದಲ್ಲಿ ಸಣ್ಣ ವಸ್ತುಗಳನ್ನು ನೀಲಿ ಬಣ್ಣದಲ್ಲಿ ಚಿತ್ರಿಸುವಂತೆ ಮಕ್ಕಳಿಗೆ ಹೇಳುವುದು.



**ಚಟುವಟಿಕೆ 15: ಆಕಾರಗಳನ್ನು ಪರಸ್ಪರ ಜೋಡಿಸುವುದು**

ಮಕ್ಕಳಿಗೆ ಆಕಾರಗಳನ್ನು ಗುರುತಿಸಿ ಹೊಂದಿಸಲು ಹೇಳುವುದು. ತದನಂತರ ಮಕ್ಕಳಿಗೆ ತಮಗೆ ಇಷ್ಟವಾದ ಬಣ್ಣದ ಕಾಗದವನ್ನು ಹರಿದು ಆಕಾರಗಳಲ್ಲಿ ಅಂಟಿಸಲು ಹೇಳುವುದು.




**ಚಟುವಟಿಕೆ 16: ನನಗೆ ತಿಳಿದಿರುವ ಪ್ರಾಣಿಗಳು**

ಮಕ್ಕಳು ತಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿ ನೋಡಿರುವ ಪ್ರಾಣಿಗಳ ಬಗ್ಗೆ ಮಾತನಾಡಲು ಸಮಯ ಕೊಡುವುದು. ಮಕ್ಕಳು ಪ್ರತಿ ಪ್ರಾಣಿಯನ್ನು ಗುರುತಿಸಿ ಅದು ಮಾಡುವ ಶಬ್ದವನ್ನು ಅನುಕರಿಸಲು ಪ್ರೋತ್ಸಾಹಿಸುವುದು. ಮಕ್ಕಳಿಗೆ ಪ್ರತಿ ಪ್ರಾಣಿಯ ಮೇಲೆ ತಮ್ಮ ತೋರುಬೆರಳನ್ನಿರಿಸಿ ಅದರ ಹೆಸರಿನಲ್ಲಿರುವ ಮೊದಲ ಶಬ್ದವನ್ನು ಧ್ವನಿ ಮಾಡುವಂತೆ ಹೇಳುವುದು. ಅವರಿಗೆ ಮೊದಲು ಹಳದಿ ಚುಕ್ಕೆಯಿಂದ ಪ್ರಾಣಿಗಳನ್ನು ಚಿತ್ರಿಸಲು ಶುರು ಮಾಡಿ ಕೆಂಪು ಚುಕ್ಕಿ ಕಡೆಗೆ ಹೋಗುವಂತೆ ತಿಳಿಸುವುದು. ಚುಕ್ಕಿಗಳನ್ನು ಸೇರಿಸುವಾಗಲೇ ಮಕ್ಕಳಿಗೆ ಕೊಟ್ಟಿರುವ ಪ್ರಾಣಿಗಳ ಆಹಾರವನ್ನು ಗುರುತಿಸಲು ಹೇಳುವುದು. ಹಾಗೆ ಸಿಂಹದ ಆಹಾರವೇನೆಂದು ಯೋಚಿಸಲು ಹೇಳುವುದು.



**ಚಟುವಟಿಕೆ 17: ನಾನು ಶಾಲೆಗೆ ಹೋಗುವ ಮುಂಚೆ ಮಾಡುವ ಕೆಲಸಗಳು**

ಮಕ್ಕಳಿಗೆ ಚಿತ್ರವನ್ನು ನೋಡಿ ಹಾಗೂ ಮಾಡುವ ಕೆಲಸಕ್ಕನುಗುಣವಾಗಿ ಆರೋಹಣ ಕ್ರಮದಲ್ಲಿ ಗುರುತಿಸಲು ಹೇಳುವುದು. ಪ್ರತಿ ಚಿತ್ರದಲ್ಲಿರುವ ಕೆಲಸವನ್ನು ಹೆಸರಿಸುವಂತೆ ಅವರಿಗೆ ಹೇಳುವುದು. ಕೊನೆಯ ಚೌಕದಲ್ಲಿ ತಮ್ಮ ಶಾಲೆಯ ಚಿತ್ರವನ್ನು ಬಿಡಿಸಲು ಪ್ರೋತ್ಸಾಹಿಸುವುದು. ಹಾಗೆಯೇ ಪ್ರತಿ ಚಿತ್ರವನ್ನು ಕತ್ತರಿಸಿ ಸರಿಯಾದ ಆರೋಹಣ ಕ್ರಮದಲ್ಲಿ ಜೋಡಿಸಲು ಮಕ್ಕಳಿಗೆ ತಿಳಿಸುವುದು.



**ಚಟುವಟಿಕೆ 18: ನನ್ನ ಇಷ್ಟದ ತಿಂಡಿ-ತಿನಿಸುಗಳು**

ಪದ್ಯವನ್ನು ಓದುವಲ್ಲಿ ಮಕ್ಕಳಿಗೆ ಸಹಾಯ ಮಾಡುವುದು. ಮಕ್ಕಳಿಗೆ ಇಷ್ಟವಾದ ತಿಂಡಿಗಳ ಬಗ್ಗೆ ಮಾತನಾಡುತ್ತಾ ಅದನ್ನು ಕಾರ್ಯಹಾಳೆಯ ೧೮ ಮತ್ತು ೧೯ಕ್ಕೆ ಸಮೀಕರಿಸುವುದು. ಸಸ್ಯಗಳಿಂದ ನಮಗಾಗುವ ಅನುಕೂಲಗಳನ್ನು ಮಕ್ಕಳೊಂದಿಗೆ ಮಾತನಾಡುವುದು ಹಾಗೆಯೇ ಸಸ್ಯದಿಂದ ಸಿಗುವ ಆಹಾರದ ಬಗೆಗೂ ಮಕ್ಕಳೊಂದಿಗೆ ಮಾತನಾಡುವುದು.



**ಚಟುವಟಿಕೆ 19: ಆಕಾರಗಳಿಗೆ ಬಣ್ಣಗಳನ್ನು ತುಂಬುವುದು**

ಕಾರ್ಯಹಾಳೆಯನ್ನು ಮಕ್ಕಳಿಗೆ ಅರ್ಥೈಸುವುದು. ಹಾಗೆಯೇ ಅವರಿಗೆ ಆಕಾರಗಳನ್ನು ಗುರುತಿಸಿ, ಅದನ್ನು ಹೆಸರಿಸಿ ಮತ್ತು ಅದಕ್ಕೆ ಬಣ್ಣ ತುಂಬುವಂತೆ ಪ್ರೋತ್ಸಾಹಿಸುವುದು. ತ್ರಿಭುಜಗಳನ್ನು ಹಳದಿಯಿಂದ, ಚತುರ್ಭುಜಗಳನ್ನು ಹಸಿರಿನಿಂದ ಹಾಗೂ ವೃತ್ತಗಳನ್ನು ನೀಲಿಯಿಂದ ತುಂಬಲು ಹೇಳುವುದು.

© NCERT not to be republished



**ಚಟುವಟಿಕೆ 20: ಸುರಕ್ಷಿತವಾಗಿರುವುದು**

ಮಕ್ಕಳಿಗೆ ಸುರಕ್ಷಿತ ಹಾಗೂ ಅಸುರಕ್ಷಿತ ಸಂದರ್ಭಗಳನ್ನು ಅರ್ಥೈಸಿಕೊಳ್ಳಲು ಸಹಾಯ ಮಾಡುವುದು ಮತ್ತು ಇಂತಹ ಸಂದರ್ಭದಲ್ಲಿ ಅವರು ಏನು ಮಾಡಬೇಕೆಂದು ಹೇಳಿಕೊಡುವುದು. ಹೇಳುವಾಗ ಅವರು ಹೆದರದಂತೆ ನೋಡಿಕೊಳ್ಳುವುದು. ಪ್ರತಿ ಮಕ್ಕಳು ಸುರಕ್ಷಿತವಾಗಿ ಸಂರಕ್ಷಿತವಾಗಿರುವುದು ಅವರ ಹಕ್ಕು ಎಂದು ಅವರಿಗೆ ಅರ್ಥೈಸಬೇಕು. ಹಾಗೆಯೇ ಅವರು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದು ಹೇಗೆ ಎಂದು ಹೇಳಿಕೊಡುವುದು. ಸಹಾಯಕ ದೂರವಾಣಿಗಳ ಬಗ್ಗೆ ಅವರಲ್ಲಿ ಅರಿವು ಮೂಡಿಸುವುದು. ಈ ಕಾರ್ಯಹಾಳೆಯಲ್ಲಿ ಚಿತ್ರಗಳನ್ನು ಗಮನಿಸಿ ಸುರಕ್ಷಿತ ಹಾಗೂ ಅಸುರಕ್ಷಿತ ಸಂದರ್ಭಗಳನ್ನು ಗುರುತಿಸಲು ಹೇಳುವುದು.



**ಚಟುವಟಿಕೆ 21: ವ್ಯತ್ಯಾಸವನ್ನು ಗುರುತಿಸುವುದು**

ಮಕ್ಕಳಿಗೆ ಎರಡು ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ ಅದರಲ್ಲಿರುವ ವ್ಯತ್ಯಾಸಗಳನ್ನು ಕಂಡುಹಿಡಿದು ವ್ಯತ್ಯಾಸದ ಸುತ್ತ ಸುರುಳಿ ಮಾಡುವಂತೆ ಹೇಳುವುದು. ಇದರಂತೆಯೇ ಸಮಾನ ಕಾರ್ಯಹಾಳೆಗಳನ್ನು ಮಕ್ಕಳಿಗಾಗಿ ತಯಾರಿಸುವುದು.



**ಚಟುವಟಿಕೆ 22: ನಮೂನೆಯನ್ನು ಕಂಡುಹಿಡಿದು ಅದಕ್ಕೆ ಬಣ್ಣ ತುಂಬುವುದು**

ಮಕ್ಕಳಿಗೆ ನಮೂನೆಯನ್ನು ಗಮನಿಸಿ ಅದರಲ್ಲಿ ಬಣ್ಣ ತುಂಬಲು ಹೇಳುವುದು. ಹಾಗೆ ನಮೂನೆಯನ್ನು ಗುರುತಿಸುವಂತೆ ಅವರನ್ನು ಪ್ರೋತ್ಸಾಹಿಸುವುದು. ಉದಾಹರಣೆಗೆ ಸೇಬು-ಬಾಳೆಹಣ್ಣು-ಸೇಬು-ಬಾಳೆಹಣ್ಣು ಮತ್ತೆ ಸೇಬು ಇತ್ಯಾದಿ.



**ಚಟುವಟಿಕೆ 23: ಆಕಾರಗಳನ್ನು ಸ್ವತಃ ರಚಿಸುವುದು**

ಈ ಕಾರ್ಯಹಾಳೆಯ ಮೇಲ್ಭಾಗದಲ್ಲಿ ಕೆಲವು ಆಕಾರಗಳನ್ನು ಚಿತ್ರಿಸಲಾಗಿದೆ. ಇದನ್ನು ಬಳಸಿಕೊಂಡು ಮಕ್ಕಳು ಆಕೃತಿಗಳನ್ನು, ವಿನ್ಯಾಸಗಳನ್ನು ಅಥವಾ ನಮೂನೆಗಳನ್ನು ಸೃಷ್ಟಿಸುವಂತೆ ಪ್ರೋತ್ಸಾಹಿಸುವುದು. ಸೃಷ್ಟಿಸಿದ ಆಕೃತಿ, ವಿನ್ಯಾಸ ಹಾಗೂ ನಮೂನೆಗಳಿಗೆ ಬಣ್ಣ ತುಂಬಲು ಹೇಳುವುದು.



**ಚಟುವಟಿಕೆ 24: ನನ್ನ ಸೃಜನಶೀಲ ವೃತ್ತಗಳು (ನಾನು ರಚಿಸಿದ ವೃತ್ತಗಳು)**

ಈ ಕಾರ್ಯಹಾಳೆಯಲ್ಲಿ ಆರು ವೃತ್ತಗಳನ್ನು ಕೊಡಲಾಗಿದೆ. ಮಕ್ಕಳಿಗೆ ಇದರಲ್ಲಿ ತಮಗೆ ಇಷ್ಟ ಇರುವುದನ್ನು ಬರೆಯುವಂತೆ ಪ್ರೋತ್ಸಾಹಿಸುವುದು. ಒಂದು ವೃತ್ತವನ್ನು ಉದಾಹರಣೆಯಾಗಿ ನೀಡಲಾಗಿದೆ.



**ಚಟುವಟಿಕೆ 25: ನನ್ನ ಆಟಿಕೆಗಳು (ಚಿತ್ರ ಓದುವುದು)**

ಮಕ್ಕಳಿಗೆ ಚಿತ್ರವನ್ನು ಗಮನಿಸಿ ಅದರ ಬಗ್ಗೆ ಮಾತನಾಡಲು ಸಮಯ ಕೊಡುವುದು. ಚಿತ್ರವನ್ನು ಉಪಯೋಗಿಸಿಕೊಂಡು ಅದರ ಸುತ್ತ ಒಂದು ಕಥೆಯನ್ನು ಸೃಷ್ಟಿ ಮಾಡುವುದು. ಮಕ್ಕಳಿಗೆ ಆಟಿಕೆಗಳನ್ನು ಗುರುತಿಸಿ, ಅದನ್ನು ಹೆಸರಿಸಿ ಮತ್ತು ತಮ್ಮ ಬಳಿ ಇರುವ ಆಟಿಕೆಗಳನ್ನು ಹೆಸರಿಸಲು ಹೇಳುವುದು. ಸುತ್ತಮುತ್ತಲು ಸಿಗುವ ವಸ್ತುಗಳಿಂದ ಆಟಿಕೆಯನ್ನು ಮಾಡುವಲ್ಲಿ ಅವರ ಸಹಾಯವನ್ನು ಪಡೆಯುವುದು.

**ಚಟುವಟಿಕೆ 26: ನನ್ನ ಕೊಲೇಜ್ ಚಿತ್ರಗಾರಿಕೆ**



ಮಕ್ಕಳಿಗೆ ತಮ್ಮ ದೇಹದ ನೈರ್ಮಲ್ಯತೆ ಮತ್ತು ಸ್ವಚ್ಛತೆಯ ಬಗೆಗಿನ ಇಷ್ಟವಾದ ಚಿತ್ರಗಳನ್ನು ಹಳೆಯ ಪತ್ರಿಕೆಯಿಂದ ಕತ್ತರಿಸಿಕೊಳ್ಳಲಿ. ಇದನ್ನು ಕೊಟ್ಟಿರುವ ಚೌಕದಲ್ಲಿ ತೇಪೆಚಿತ್ರಗಾರಿಕೆಯಾಗಿ ಅಂಟಿಸಲಿ. ಇದರ ಕೆಳಗೆ ಮಕ್ಕಳು ಚಿತ್ರದ ಬಗ್ಗೆ ಒಂದೆರಡು ಸಾಲುಗಳನ್ನು ಬರೆಯುವಂತೆ ಪ್ರೋತ್ಸಾಹಿಸುವುದು.

**ಚಟುವಟಿಕೆ 27: ನಮ್ಮ ಸುತ್ತಮುತ್ತಲಿನ ಪ್ರಾಣಿ ಪಕ್ಷಿಗಳು**



'ಚಿವ್-ಚಿವ್ ಎನ್ನುತ್ತೆ ಪಕ್ಷಿ' ಎಂಬ ಪದ್ಯವನ್ನು ಅಭಿನಯದ ಮೂಲಕ ಮಕ್ಕಳ ಕೈಯಿಂದ ಹೇಳಿಸುವುದು. ಇದರೊಂದಿಗೆ ಮಕ್ಕಳಿಗೆ ಹೊಸ ಹೊಸ ಪ್ರಾಣಿ ಪಕ್ಷಿಗಳ ಹೆಸರನ್ನು ಸೇರಿಸುತ್ತಾ ಅವು ಮಾಡುವ ಶಬ್ದಗಳನ್ನು ಅನುಕರಣೆ ಮಾಡುವಂತೆ ಪ್ರೇರೇಪಿಸುವುದು. ಮಕ್ಕಳಲ್ಲಿ ಪ್ರಾಣಿ/ಪಕ್ಷಿಗಳ ಭಿತ್ತಿ ಚಿತ್ರಗಳನ್ನು ಹಾಗೂ ಬೊಂಬೆಗಳನ್ನು ಸುತ್ತಮುತ್ತಲೂ ಸಿಗುವ ವಸ್ತುಗಳಿಂದ ಮಾಡಲು ಹೇಳಿಕೊಡುವುದು. ಈ ಭಿತಿ ಚಿತ್ರಗಳು ಹಾಗೂ ಬೊಂಬೆಗಳಿಗೆ ಹಿನ್ನೆಲೆಯಾಗಿ ಕಥೆಯನ್ನು ಅಥವಾ ಪದ್ಯವನ್ನು ಮಕ್ಕಳಲ್ಲಿ ಸೃಷ್ಟಿಸುವುದು.

**ಚಟುವಟಿಕೆ 28: ಪ್ರಾಸ ಪದಗಳನ್ನು ಹೊಂದಿಸಿ ಬರೆಯಿರಿ**



ಮಕ್ಕಳು ಚಿತ್ರಗಳನ್ನು ಗಮನಿಸಿ, ಅದನ್ನು ಹೆಸರಿಸಿ ಹಾಗೂ ಅದರಲ್ಲಿ ಪ್ರಾಸವಿರುವ ಚಿತ್ರಗಳನ್ನು ಗೆರೆಯ ಮೂಲಕ ಹೊಂದಿಸಿ ಬರೆಯಲಿ.

**ಚಟುವಟಿಕೆ 29: ಪ್ರಾಸ ಪದಗಳು**



ಮಕ್ಕಳು ಚಿತ್ರಗಳನ್ನು ಗಮನಿಸಿ ಅದನ್ನು ಹೆಸರಿಸಿ, ಚಿತ್ರದ **ಹೆಸರು** ಹೇಗೆ ಪ್ರಾಸಬದ್ಧವಾಗಿದೆ ಎಂದು ಚರ್ಚೆ ಮಾಡಲಿ. ಉದಾಹರಣೆಗೆ ಹಾಲು-ಕಾಲು, ಕಾರು-ನೀರು, ಇತ್ಯಾದಿ. ಕೊಟ್ಟಿರುವ ಚಿತ್ರಗಳು ಪ್ರಾಸವಾಗಿದ್ದರೆ ಸಂತಸದಲ್ಲಿರುವ ಮುಖಕ್ಕೆ ಬಣ್ಣ ತುಂಬಲು ಹೇಳಬೇಕು ಪ್ರಾಸವಾಗಿರದಿದ್ದರೆ ದುಃಖದಲ್ಲಿರುವ ಮುಖಕ್ಕೆ ಬಣ್ಣ ತುಂಬಲು ಹೇಳಬೇಕು.

**ಚಟುವಟಿಕೆ 30: ವಸ್ತುಗಳನ್ನು ಲೆಕ್ಕ ಹಾಕುವುದು (ಸಂಖ್ಯೆ ೧-೧೦)**



ಮಕ್ಕಳು ವಸ್ತುಗಳನ್ನು ಗಮನಿಸಿ ಮತ್ತು ಅದನ್ನು ಲೆಕ್ಕ ಹಾಕಲು ಹೇಳುವುದು. ಪ್ರತಿ ಚೌಕದಲ್ಲೂ ಕೊಟ್ಟಿರುವ ಸಂಖ್ಯೆಯಷ್ಟೇ ವಸ್ತುಗಳನ್ನು ಸುರುಳಿ ಸುತ್ತಿಸುವುದು. ಉದಾಹರಣೆಗೆ ಹತ್ತು ರೊಟ್ಟಿಗಳನ್ನು ಸುರುಳಿ ಮಾಡುವುದು ಎಂದು ಕೊಟ್ಟಿದ್ದಾರೆ ಮಕ್ಕಳು ಹತ್ತೇ ರೊಟ್ಟಿಯನ್ನು ಸುರುಳಿ ಮಾಡಿಸತಕ್ಕದ್ದು.

**ಚಟುವಟಿಕೆ 31: ಜಟಿಲ ಮಾರ್ಗಜಾಲ (ಚಕ್ರವ್ಯೂಹ)**



ಮಕ್ಕಳು ಜಟಿಲ ಮಾರ್ಗಜಾಲವನ್ನು ತಮ್ಮ ತೋರು ಬೆರಳಿನ ಸಹಾಯದಿಂದ ಭೇದಿಸಿ ಸಿಯಾ ತನ್ನ ಹಸುವನ್ನು ಕೊಟ್ಟಿಗೆಗೆ ಕರೆದೊಯ್ಯುವಂತೆ ಮಾಡಬೇಕು. ಹಾಗೆಯೇ ಬಣ್ಣದ ಬಳಪದ ಸಹಾಯದಿಂದ ಸಿಯಾಳಿಗೆ ತನ್ನ ಹಸುವನ್ನು ಕೊಟ್ಟಿಗೆಗೆ ಕರೆದೊಯ್ಯಲು ಸರಿಯಾದ ಮಾರ್ಗವನ್ನು ತೋರಿಸಬೇಕು.

© NCERT not to be republished



**ಚಟುವಟಿಕೆ 32: ದೊಡ್ಡದು ಮತ್ತು ಚಿಕ್ಕದು**

ದೊಡ್ಡ ವಸ್ತುವಿನಲ್ಲಿ ಕೆಂಪು ಬಣ್ಣದ ಕಾಗದವನ್ನು ಹರಿದು ಅಂಟಿಸಲು ಮಕ್ಕಳಿಗೆ ಹೇಳುವುದು ಹಾಗೆ ಸಣ್ಣ ವಸ್ತುಗಳಲ್ಲಿ ಹಳದಿ ಬಣ್ಣದ ಕಾಗದವನ್ನು ಹರಿದು ಅಂಟಿಸಲು ಹೇಳುವುದು.



**ಚಟುವಟಿಕೆ 33: ನಮೂನೆಯನ್ನು ಅನುಸರಿಸುವುದು**

ಮಕ್ಕಳು ನಮೂನೆಯನ್ನು ನೋಡಿ, ಅದನ್ನು ಗುರುತಿಸಿ ಹಾಗೂ ಅದನ್ನು ಕೊಟ್ಟಿರುವ ಸ್ಥಳದಲ್ಲಿ ಅನುಸರಿಸಲು ಹೇಳುವುದು.



**ಚಟುವಟಿಕೆ 34 and 35: ಚಿತ್ರ ಬಿಡಿಸುವುದು ಮತ್ತು ಸರಿಯಾದ ಸಂಖ್ಯೆಯನ್ನು ಸೇರುವುದು**

ಮಕ್ಕಳು ಹಾದಿಯನ್ನು ಲೆಕ್ಕ ಹಾಕಿ, ಬೆರಳ ಸಹಾಯದಿಂದ ಹಾದಿಯನ್ನು ಜೋಡಿಸುವುದು. ಹಾಗೆಯೇ ಗೆರೆಯನ್ನು ಎಳೆದು ಕೊಟ್ಟಿರುವ ಹಾದಿಯನ್ನು ಸರಿಯಾದ ವೃತ್ತದ ಸಂಖ್ಯೆಗೆ ಹೊಂದಿಸುವುದು.



**ಚಟುವಟಿಕೆ 36: ಮರಿ ಹುಳುವನ್ನು ಸಂಪೂರ್ಣಗೊಳಿಸುವುದು**

ಮಕ್ಕಳು ಕೊಟ್ಟಿರುವ ಸಂಖ್ಯೆಯ ವೃತ್ತಗಳನ್ನು ಬಿಡಿಸುತ್ತಾ ಮರಿ ಹುಳುವನ್ನು ಪ್ರತಿ ಸಾಲಿನಲ್ಲಿಯೂ ಸಂಪೂರ್ಣಗೊಳಿಸಬೇಕು. ಇದರಂತೆಯೇ ಕಾರ್ಯಹಾಳೆಗಳನ್ನು ತಯಾರಿಸಿ ಕೊಡಬೇಕು. ಉದಾಹರಣೆಗೆ ರೈಲಿನ ಬೋಗಿಗಳನ್ನು ಕೊಟ್ಟಿರುವ ಸಂಖ್ಯೆ ಎಷ್ಟು ಎಂದು ಬರೆಯುವಂತೆ ಹೇಳುವುದು.



**ಚಟುವಟಿಕೆ 37: ಸಿಂಹ ಮತ್ತು ಇಲಿ**

ಮಕ್ಕಳಿಗೆ ಕಥೆಯ ಕಾಗದವನ್ನು ತೋರಿಸುತ್ತಾ ಕಥೆಯನ್ನು ಹೇಳುವುದು. ಇದರ ಮಧ್ಯೆ ಈ ಕಥೆಯ ಮೂಲವೇನು? ಎಲ್ಲಿ ಈ ಕಥೆಯು ನಡೆಯಿತು? ಈ ಕಥೆಯಲ್ಲಿ ಇರುವಂತಹ ಗೊಂದಲವೇನು? ತೋರಿಸಿದ ಚಿತ್ರಗಳಲ್ಲಿ ಯಾವ ಪ್ರಾಣಿಗಳನ್ನು ನೋಡಿದಿರಿ? ಈ ಕಥೆಯಲ್ಲಿ ನಿಮಗೆ ಇಷ್ಟವಾಗುವುದು ಏನು? ಈ ಕಥೆಗೆ ಮತ್ತೊಂದು ಹೆಸರನ್ನು ಕೊಡುವಿರಾ? ಎಂತೆಲ್ಲ ಪ್ರಶ್ನೆಗಳನ್ನು ಕೇಳಿ, ಕೊಟ್ಟಿರುವ ಕಥೆಯ ಕಾಗದದ ಮೇಲೆ ಎಳೆದಿರುವ ಚಿತ್ರಿಸಿದ ಗೆರೆಗೆ ಸರಿಯಾಗಿ ಕತ್ತರಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದು. ಕತ್ತರಿಸಿದ ನಂತರ ಅವುಗಳನ್ನು ಆರೋಹಣ ಕ್ರಮದಲ್ಲಿ ಜೋಡಿಸಿ ಕಥೆಯನ್ನು ಪುನರಾವರ್ತಿಸುವುದು.

**ಚಟುವಟಿಕೆ 38: ಪಾರಿವಾಳ ಮತ್ತು ಬೇಟೆಗಾರ**



ಮಕ್ಕಳು ಕಥೆಯ ಕಾಗದವನ್ನು ಓದಿ ಈ ಕಥೆಯು ಯಾವುದರ ಬಗ್ಗೆ ಇದೆ? ಈ ಕಥೆ ಎಲ್ಲಿ ನಡೆಯಿತು? ಈ ಕಥೆಯಲ್ಲಿರುವ ಗೊಂದಲವೇನು? ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವ ಪಕ್ಷಿಗಳು ತಮ್ಮನ್ನು ತಾವು ಹೇಗೆ ಬಿಡಿಸಿಕೊಂಡವು? ಈ ಕಥೆಯ ಕಾಗದದಲ್ಲಿ ಕಂಡು ಬರುವ ಪಕ್ಷಿಗಳಾವುವು? ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಚರ್ಚಿಸಲಿ. ಹಾಗೆಯೇ ಸುತ್ತಮುತ್ತಲು ತಾವು ಕಾಣುವ ಪಕ್ಷಿಗಳನ್ನು ಹೆಸರಿಸಲಿ. ಪ್ರತಿ ಕಥೆಯ ಕಾಗದದಲ್ಲೂ ಇರುವಂತಹ ಪಾರಿವಾಳದ ಸಂಖ್ಯೆ ಮಕ್ಕಳು ಎಣಿಸಲಿ. ಕೊಟ್ಟಿರುವಂತಹ ಕಥೆಯ ಕಾಗದದ ಮೇಲಿನ ಗೆರೆಗೆ ಸರಿಯಾಗಿ ಮಕ್ಕಳು ಕಥೆಯ ಕಾಗದವನ್ನು ಕತ್ತರಿಸಿ ಅವುಗಳನ್ನು ಆರೋಹಣ ಕ್ರಮದಲ್ಲಿ ಜೋಡಿಸಲು ಹೇಳುವುದು. ತದನಂತರ ಕಥೆಯನ್ನು ಪುನರಾವರ್ತಿಸಲು ಹೇಳುವುದು. ಕೊನೆಯಲ್ಲಿ

© NCERT not to be republished

ಮಕ್ಕಳನ್ನು ಬಹಳ ಪ್ರಸಿದ್ಧವಾದ ಪದ್ಯ 'ಒಂದು ಪಾರಿವಾಳ ಹಲವು ಪಾರಿವಾಳಗಳು' ಪರಿಚಯಿಸುವುದು.



**ಚಟುವಟಿಕೆ 39: ಸರಿಯಾದ ಗಾತ್ರ**

ಮಗುವು ಚಿತ್ರಗಳನ್ನು ಅವುಗಳ ಗಾತ್ರಕ್ಕೆ ಅನುಗುಣವಾಗಿ 'ದೊಡ್ಡ', 'ಮಧ್ಯಮ' ಮತ್ತು 'ಸಣ್ಣ' ಎಂದು ಗುರುತಿಸಿ ಬರೆಯಲಿ. ಕೊಟ್ಟಿರುವ ಚಿತ್ರಗಳ ಮೇಲೆ ಶಿಕ್ಷಕರೇ ಕಥೆಯನ್ನು ರಚಿಸಬಹುದು ಅಥವಾ ಮಕ್ಕಳು ದೊಡ್ಡ- ಅತೀ ದೊಡ್ಡ- ಅತ್ಯಂತ ದೊಡ್ಡ ಅಥವಾ ಚಿಕ್ಕ- ಅತೀ ಚಿಕ್ಕ- ಅತ್ಯಂತ ಚಿಕ್ಕ ಮತ್ತು ಮುಂತಾದ ಗಣಿತದ ಶಬ್ದಗಳನ್ನು ಬಳಸಿ ಕಥೆಯನ್ನು ರಚಿಸಲು ಅವಕಾಶ ಮಾಡಿಕೊಡಬಹುದು. ನಂತರ ಮಕ್ಕಳು ಚುಕ್ಕೆಗಳ ರೇಖೆ ಗುರುತಿನ ಅನುಸಾರವಾಗಿ, ಮಕ್ಕಳಿಗೆ ತಕ್ಕ ಕತ್ತರಿ ಬಳಸಿ, ಚಿತ್ರಗಳನ್ನು ಕತ್ತರಿಸಿ ಸೂಕ್ತ ಸ್ಥಳದಲ್ಲಿ ಅಂಟಿಸಬಹುದು. ಉದಾಹರಣೆಗೆ, ಮಧ್ಯಮ ಗಾತ್ರದ ಬೌಲ್ ಅನ್ನು ಮಧ್ಯಮ ಗಾತ್ರದ ಗೊಂಬೆಯ ಕೆಳಗೆ ಅಂಟಿಸಬೇಕು ಹೀಗೆ.

**ಚಟುವಟಿಕೆ 40: ದೊಡ್ಡದು ಮತ್ತು ಚಿಕ್ಕದು**

ಮಕ್ಕಳಿಗೆ ಹಳೆಯ ಪತ್ರಿಕೆ/ ಪುರವಣಿಗೆಗಳಿಂದ ಕತ್ತರಿಸಿ ದೊಡ್ಡ ಮತ್ತು ಸಣ್ಣ ಗಾತ್ರದ ಆಕಾರಗಳನ್ನು ಕೊಟ್ಟಿರುವ ಖಾಲಿ ಜಾಗದಲ್ಲಿ ಅಂಟಿಸಲು ಹೇಳಿ.



**ಚಟುವಟಿಕೆ 41: ಕೆಂಪು ಕೋಟೆ**

ಸ್ವಾತಂತ್ರ್ಯ ದಿನಾಚರಣೆ-ನಮ್ಮ ರಾಷ್ಟ್ರೀಯ ಹಬ್ಬ ಮತ್ತು ಅದರ ಮಹತ್ವದ ಕುರಿತು ಮಾತನಾಡಿ. ರಾಷ್ಟ್ರಧ್ವಜ ಮತ್ತು ಕೆಂಪು ಕೋಟೆಗೆ ಮಗು ಬಣ್ಣ ಹಚ್ಚಲಿ.



**ಚಟುವಟಿಕೆ 42: ಇತರರಿಗೆ ದಯೆ**

ವೃತ್ತದ ಪ್ರಕಾರದಲ್ಲಿ ಮಕ್ಕಳ ನಡುವೆ ಚರ್ಚೆ ನಡೆಸಿ ಮತ್ತು ನಾವು ಯಾವಾಗಲೂ ಪ್ರಾಣಿಗಳನ್ನು ಹೇಗೆ ದಯೆಯಿಂದ ನಡೆಸಿಕೊಳ್ಳಬೇಕು ಎಂಬುದರ ಕುರಿತು ಮಾತನಾಡಿ. ನಮ್ಮ ಪ್ರತಿ ನಡೆವಳಿಕೆಯಲ್ಲಿ ದಯೆ ಇರಬೇಕು. ಮಕ್ಕಳು ಪದ್ಯಗಳನ್ನು ಕ್ರಿಯೆಗಳೊಂದಿಗೆ ಪುನಾರಾವರ್ತಿಸಲಿ. ಪ್ರಾಣಿಗಳ ಕಥೆಯನ್ನು ಗಟ್ಟಿಯಾಗಿ ಓದಿ. ಮಕ್ಕಳಿಗೆ ಕಾಗದ ಮಡಿಸುವ ಮೂಲಕ 'ಮೀನು' ಮಾಡಲು ಸಹಾಯ ಮಾಡಿ ಮತ್ತು ಕೊಟ್ಟಿರುವ ಜಾಗದಲ್ಲಿ ಮೀನುಗಳನ್ನು ಅಂಟಿಸಲು ಬಿಡಿ. ಅವರು ಮೀನಿನ ಚಿತ್ರವನ್ನು ಬಿಡಿಸಲೂಬಹುದು.




**ಚಟುವಟಿಕೆ 43: ಆರೋಗ್ಯಕರ ಆಹಾರಗಳು**

ಆರೋಗ್ಯ ಮತ್ತು ಅನಾರೋಗ್ಯಕ ಆಹಾರ ಬಳಕೆಗಳ ಕುರಿತು ಚರ್ಚೆ ನಡೆಸಿ. ವಿವಿಧ ಆಹಾರ ವಸ್ತುಗಳನ್ನು ಗುರುತಿಸಿ ಹೆಸರಿಸಲು ಮಕ್ಕಳನ್ನು ಪ್ರೇರೇಪಿಸಿ. ಮಕ್ಕಳು ದಿನನಿತ್ಯ ಬಳಸುವ ಆಹಾರದ ಬಗ್ಗೆ ಕೇಳಿ, ಅವುಗಳಲ್ಲಿ ಆರೋಗ್ಯಕರ ಆಹಾರಗಳನ್ನು ಗುರುತಿಸಲು ಹೇಳಿ.

© NCERT not to be republished



### ಚಟುವಟಿಕೆ 44 and 45: ಆಟದ ಮೈದಾನದಲ್ಲಿ (ಚಿತ್ರ ಓದುವಿಕೆ)

ಮಕ್ಕಳು ಆಟದ ಮೈದಾನದ ಚಿತ್ರವನ್ನು ನೋಡಿ ಅದರಲ್ಲಿ ಏನಾಗುತ್ತಿದೆ ಎಂಬುದರ ಕುರಿತು ಮಾತನಾಡಲಿ. ಅಭ್ಯಾಸ ಹಾಳೆಯಲ್ಲಿ ಕೊಟ್ಟಿರುವ ಕೆಲವು ಉದಾಹಣೆಗಳಂತೆ, ಸೃಜನಶೀಲ ಮತ್ತು ವಿಮರ್ಶಾತ್ಮಕ ಚಿಂತನೆಯ ಪ್ರಶ್ನೆಗಳನ್ನು ಕೇಳಿ. ಹತ್ತಿರದ ಉದ್ಯಾನವನಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಿ ಮತ್ತು ಹೊರಾಂಗಣ ಆಟವನ್ನು ಆಡುತ್ತಾ ಆನಂದಿಸಲು ಅವಕಾಶ ಮಾಡಿಕೊಡಿ. ಉದುರಿದ ಎಲೆಗಳು, ಕೊಂಬೆಗಳು, ಹೂವುಗಳು ಇತ್ಯಾದಿಗಳನ್ನು ಸಂಗ್ರಹಿಸಲು ಹೇಳಿ ಮತ್ತು ಅವುಗಳನ್ನು ವರ್ಗೀಕರಿಸುವ, ಅವುಗಳಿಂದ ಆಕೃತಿಗಳನ್ನು ರಚಿಸಿ ವಿವರಿಸುವ ಚಟುವಟಿಕೆಗಳನ್ನು ಮಾಡಲು ಹೇಳಿ. ನಂತರ ಮಕ್ಕಳು ತಾವು ಕಂಡುಕೊಂಡ ವಸ್ತುಗಳನ್ನು/ಸಂಗ್ರಹಗಳನ್ನು ಬಳಸಿ ಚಾರ್ಟ್ ಮತ್ತು ಎಲೆಗಳ, ಹೂಗಳ ಮುದ್ರಣಗಳನ್ನು ಮಾಡಲಿ.



### ಚಟುವಟಿಕೆ 46: ನನ್ನ ಹತ್ತು ಬಲೂನ್ ಗಳು

ಮೀನಾ ಮತ್ತು ರವಿಯ ಬಗ್ಗೆ ಒಂದು ಕಥೆಯನ್ನು ರಚಿಸಿ. ಒಮ್ಮೆ ಇಬ್ಬರೂ ಹೇಗೆ ಬಣ್ಣಬಣ್ಣದ ಬಲೂನ್‌ಗಳೊಂದಿಗೆ ಆಡಲು ಬಯಸುತ್ತಾರೆ ಎಂದು ಹೇಳಿ. ಮಕ್ಕಳು ಕಥೆಯನ್ನು ಮುಂದುವರೆಸಿ ಕಥೆಗೆ ಶೀರ್ಷಿಕೆಯನ್ನು ನೀಡಲು ಪ್ರೇರೇಪಿಸಿ. ನಂತರ ಕೊಟ್ಟಿರುವ ಬಲೂನ್‌ಗಳನ್ನು ಎಣಿಸಿ, ಬಣ್ಣ ಹಾಕಿ ನಂತರ ಪ್ರತಿ ಬಲೂನ್‌ಗೆ ದಾರವನ್ನು ಎಳೆದು, ಮೊದಲ ಬಲೂನ್‌ಗಳ ಗುಂಪನ್ನು ಮೀನಾಳ ಕೈಗೆ ಮತ್ತು ಎರಡನೇ ಬಲೂನ್‌ಗಳ ಗುಂಪನ್ನು ರವಿಯ ಕೈಗೆ ಜೋಡಿಸಲು ತಿಳಿಸಿ. ಕೊನೆಗೆ ಎಲ್ಲಾ ಬಲೂನ್‌ಗಳನ್ನು ಎಣಿಸಿ ಒಟ್ಟು ಸಂಖ್ಯೆಯನ್ನು ಚೌಕದಲ್ಲಿ ಬರೆಯಲು ಹೇಳಿ.



### ಚಟುವಟಿಕೆ 47: ಎಣಿಸಿ ಮತ್ತು ಬಣ್ಣ ತುಂಬಿ

ರೈಲಿನ ಬೋಗಿಗಳ ಸಂಖ್ಯೆಯನ್ನು ಎಣಿಸಿ, ಪ್ರತಿ ಬೋಗಿ ಸಂಖ್ಯೆಗೆ ನೀಡಲಾದ ಬಣ್ಣಗಳ ಪ್ರಕಾರ ಅವುಗಳಿಗೆ ಬಣ್ಣ ತುಂಬಲು ಮಕ್ಕಳಿಗೆ ಹೇಳಿ. ಸಂಖ್ಯೆಗಳ ಮೇಲೆ ಪದ್ಯವನ್ನು ಹಾಡಿ. ಮಕ್ಕಳು ಖಾಲಿ ಬೆಂಕಿಪಟ್ಟಣಗಳನ್ನು ಅಥವಾ ಆಹಾರದ ಪಾತ್ರೆಗಳನ್ನು (ಅಥವಾ ಸುಲಭವಾಗಿ ಲಭ್ಯವಿರುವ ಮತ್ತು ಯಾವುದೇ ವೆಚ್ಚವಿಲ್ಲದ ವಸ್ತುಗಳನ್ನು) ಸಂಗ್ರಹಿಸಿ ಅವುಗಳಿಂದ ಸಣ್ಣ ರೈಲನ್ನು ರಚಿಸಲು ಅವರಿಗೆ ಮಾರ್ಗದರ್ಶನ ನೀಡಿ. ಗುಂಪುಗಳಲ್ಲಿ ಕೆಲಸ ಮಾಡುವಾಗ ಮಕ್ಕಳ ನಡುವಿನ ಸಂಭಾಷಣೆ, ಅವರ ವಸ್ತುಗಳನ್ನು ಪರಸ್ಪರ ಹಂಚಿಕೊಳ್ಳುವುದನ್ನು ಗಮನಿಸಿ. 'ನೀವು ಎಂದಾದರೂ ರೈಲಿನಲ್ಲಿ ಪ್ರಯಾಣ ಮಾಡಿದ್ದೀರಾ? ನೀವು ಎಲ್ಲಿಗೆ ಹೋಗಿದ್ದೀರಿ? ನೀವು ಇತರ ಯಾವ ಸಾರಿಗೆ ವಿಧಾನಗಳನ್ನು ನೋಡಿದ್ದೀರಿ? ನೀವು ಪ್ರಯಾಣವನ್ನು ಆನಂದಿಸುತ್ತೀರಾ?' ಇತ್ಯಾದಿ ವಿಷಯಗಳ ಕುರಿತು ಮಾತನಾಡಿ.

Draw here

### ಚಟುವಟಿಕೆ 48: ನನ್ನನ್ನು ನಾನು ಸ್ವಚ್ಛಗೊಳಿಸಿಕೊಳ್ಳುವೆ

ಒಬ್ಬರ ದೇಹವನ್ನು ಸ್ವಚ್ಛವಾಗಿಡಲು ಬಳಸುವ ವಸ್ತುಗಳ ಬಗ್ಗೆ ಮಕ್ಕಳು ಮಾತನಾಡಲಿ. ಚೌಕದಲ್ಲಿ ನೀಡಲಾದ ಸೂಚನೆಗಳ ಪ್ರಕಾರ ಸೂಕ್ತವಾದ ವಸ್ತುಗಳನ್ನು ಚಿತ್ರಿಸಿ ಅವುಗಳಿಗೆ ಬಣ್ಣ ತುಂಬಲು ಅವರನ್ನು ಪ್ರೋತ್ಸಾಹಿಸಿ.

© NCERT not to be republished



**ಚಟುವಟಿಕೆ 49: ರಸ್ತೆ ಸಂಚಾರದ ಸುರಕ್ಷತೆ (ಚಿತ್ರ ಓದುವಿಕೆ)**

ರಸ್ತೆಗಳಲ್ಲಿ ಸುರಕ್ಷಿತವಾಗಿರುವುದು ಬಹಳ ಮುಖ್ಯ ಎಂದು ಮಕ್ಕಳಿಗೆ ಅರ್ಥಮಾಡಿಕೊಳ್ಳಲು ಸಹಾಯ ಮಾಡಿ. ರಸ್ತ ಸಂಚಾರದ ನಿಯಮಗಳು ಮತ್ತು ಸುರಕ್ಷತಾ ಕಾರ್ಯವಿಧಾನಗಳನ್ನು ಅನುಸರಿಸಲು ಅವರಿಗೆ ಮಾರ್ಗದರ್ಶನ ನೀಡಿ ಮತ್ತು ರಸ್ತೆಬದಿಯಲ್ಲಿ ಬರೆದ ಚಿಹ್ನೆಗಳನ್ನು ಕುರಿತು ಚರ್ಚಿಸಿ. ಮಕ್ಕಳು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ, ವಿಶೇಷವಾಗಿ ರಸ್ತೆ ಸಮೀಪದಲ್ಲಿ ಸಾಮಾನ್ಯವಾಗಿ ಕಾಣುವ ಚಿಹ್ನೆಗಳನ್ನು ಹುಡುಕಿ ಗುರುತಿಸಲು ಹೇಳಿ. ಕೊಟ್ಟಿರುವ ಚಿತ್ರಗಳಲ್ಲಿ ರಸ್ತೆಯಲ್ಲಿ ಸುರಕ್ಷಿತವಾಗಿರುವ ಜನರನ್ನು ಟಿಕ್ ಮಾಡಲು ಮತ್ತು ಅಸುರಕ್ಷಿತವಾಗಿರುವವರ ಮೇಲೆ ಕ್ರಾಸ್(X) ಬರೆಯಲು ಹೇಳಿ.



